KA / :G-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಏಪ್ರಿಲ್ ೨೮, ೨೦೧೧ (ವೈಶಾಖ ೮, ಶಕ ವರ್ಷ ೧೯೩೩)	ಸಂಚಿಕೆ ೧೭

ಭಾಗ – ೩

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

OFFICE OF THE REGISTRAR GENERAL, HIGH COURT OF KARNATAKA, HIGH COURT BUILDINGS, BANGALORE 560 001

NOTIFICATION NO. HCE 6/2009 DATED 20TH APRIL 2011

RECRUITMENT OF CANDIDATES TO THE POST OF STENOGRAPHERS

LAST DATE FOR RECEIPT OF APPLICATIONS: 31ST MAY 2011(5 PM)

By withdrawing this office Notification No. HCE 6/2009 dated 01.02.2011, this Notification is issued calling for applications in the prescribed proforma appended hereto from the applicants, who are possessing qualification as detailed below as on the last date fixed for receipt of applications for recruitment to 24 posts of Stenographers (which includes 4 Backlog posts in SC Category and 1 Backlog post in ST category).

2. **Method of Recruitment:** Selection of candidates will be made in accordance with the High Court of Karnataka Service (Conditions of Service and Recruitment)Rules,1973 and the High Court of Karnataka Service (Direct Recruitment by Selection) Rules, 1984 as amended from time to time.

3. **Minimum Qualification:**

a. Must possess a Degree from a recognised university or equivalent Examination,

b. The Senior Grade Examination in English shorthand with 60% of aggregate marks; or the Proficiency Grade Examination in English Shorthand; **and**

c. Senior Grade Examination in Typewriting in English, conducted by the Department of Public Instruction of the Karnataka Secondary Education Board or equivalent qualification.

d. Certificate in Computer Word Processing or equivalent.

Note: 1. Preference will be given to those candidates who possess the qualification of Senior Grade Examination in Typewriting and Shorthand in Kannada Language.

4. **Scale of Pay :** Rs. 8000-200-8600-225-9500-250-10500-300-12300-350-14400-400-14800

5. Classification of vacancies:

	Women Candidates	Rural Candidates	Displaced from projects	Kannada Medium candidates	Physically Handicapped	Ex-servicemen	Unreserved	Total
CATEGORY – 1	1	-	-	-	-	-	-	**1**
CATEGORY-II (A)	1	1	1	-	-	-	-	**3**
CATEGORY-II (B)	1	-	-	-	-	-	-	**1**
SCHEDULED CASTE	1	1	-	1	-	-	-	**3**
SCHEDULED TRIBE	-			-	1	-	-	**1**
GENERAL MERIT	3	2	1	1	-	1	2	**10**
TOTAL	**7**	**4**	**2**	**2**	**1**	**1**	**2**	**19**

CLASSIFICATION IN RESPECT OF BACKLOG VACANCIES OF SC & ST CATEGORY

	Women Candidates	Rural Candidates	Ex-Servicemen	Unreserved	Total
SC	1	1	1	1	4
ST	-	1	-	-	1

6. **Probation:** The applicant if appointed shall be initially on probation for a period of two years or for extended period if necessary

7. **Age limit:** Applicants must have attained the age of 18 years and must not have attained the age of:-
   (a) 40 years in the case of a person belonging to Scheduled Caste or Scheduled Tribe or Category-I of other Backward Classes.
   (b) 38 years in the case of a person belonging to Category-II-A or II-B or III-A or III-B of Other Backward Classes; and
   (c) 35 years for others.

8. Those candidates called for Test / Interview will have to appear before the authorities in the premises of the High Court of Karnataka, Bangalore at their own cost.

9. Those persons, who attempt to obtain extraneous support by any means for his/her candidature from officials or non-officials, shall not be eligible for appointment.

10. **Application fee:** Every application (excluding applications by Scheduled Caste / Scheduled Tribe / Category-I applicants) shall accompany Crossed Indian Postal Order for Rs. 250/- (Rupees Two Hundred and Fifty Only) in favour of the Registrar General, High Court of Karnataka, Bangalore 560001. (Fee once paid shall not be refunded under any circumstances) (SC/ST and Category-I candidates are exempted from payment of fee.)

11. **Application Form:-** Application in the prescribed proforma shall be filled in by the candidates in their own handwriting and shall accompany attested copies obtained from the Gazetted Officers of the following certificates.
   (a) Three Certificates of character, one from the Principal / Head of the Institution in which he/she had last studied and two from respectable persons not related to him/her, testifying to his/her character.
   (b) Marks Cards of Degree / Equivalent examinations and English Senior Grade Shorthand or proficiency Grade Shorthand Examinations and Typewriting Examinations.
   (c) Persons claiming the benefit of reservations under SC/ST shall produce a certificate in the form prescribed by the Government issued by the competent authority.
   (d) SSLC or any other equivalent certificate showing the date of birth.
   (e) Persons claiming the benefit of reservations under Category-I/ II-A/II-B/III-A/III-B shall produce a certificate in the form prescribed by the Government issued by the competent authority.
   (f) Persons claiming reservation under rural quota / Physically Handicapped quota / Displaced from Projects / Kannada Medium / Ex-servicemen shall produce certificates issued by competent authority.
   (g) A passport size photo shall be affixed at the place provided on the application.

Note: Incomplete applications shall be liable to be rejected without notice. Original certificates and testimonials are to be submitted only at the time of test/interview. Candidates shall not forward the original documents alongwith the application.

12. Last date for receipt of application

(i) Applications complete in all respects shall reach the Registrar General, High Court of Karnataka, High Court Buildings, Bangalore 560 001 on or before 31[ST] MAY 2011 (05.00 P.M.). On top of the cover containing the application the following words shall be written:

"Application for the Post of Stenographer"

Applications received beyond the date so fixed will be rejected.

(ii) In-service candidates shall submit their application through their official superiors so as to reach the Registrar General, High Court of Karnataka, High Court Buildings, Bangalore 560 001, not later than the date fixed for receipt of applications.

(iii) If the last date fixed for the receipt of applications happens to be a General Holiday, the next working day shall be the last date for receipt of applications.

BY ORDER OF HON'BLE THE CHIEF JUSTICE,

B.A.PATIL

REGISTRAR (ADMINISTRATION)

FORM OF APPLICATION FOR RECRUITMENT TO THE POSTS OF STENOGRAPHERS IN THE HIGH COURT OF KARNATAKA, BANGALORE

AFFIX PASSPORT SIZE PHOTO

To

The Registrar General
High Court of Karnataka
Bangalore

1.	**Name of the applicant in full (*in block letters*)**	
2.	Name of his/her father/husband	
3.	Gender	
4.	Age and Date of Birth (as mentioned in the SSLC or equivalent certificate)	
5.	Postal Address (*in block letters*) (a) Permanent postal address (b) Present postal address (c) Telephone No. if any	
6.	Whether the applicant is presently employed? If so furnish the details of employment and monthly income.	
7.	Occupation of Parents / Guardian.	
8.	Annual Income of Parents / Guardian.	
9.	Qualification:	
10	a) Whether the Applicant belongs to Scheduled Castes / Scheduled Tribes / Category-I / Category-II(a) / II(b) / III(a) / III (b). If so, the same should be indicated. A copy of the Certificate in support of the claim should be attached.	

11	Whether the applicant has credited the prescribed fee in the form of postal order and whether he/she has enclosed the same. (mention the postal order number and date).	
12	Whether the applicant claims Rural candidate quota and if so, whether relevant certificate is enclosed.	
13	Whether the applicant claims quota of Physically handicapped. / Displaced from Projects / Kannada Medium / Ex-servicemen. If so whether relevant certificate issued by competent authority is enclosed.	
14	Whether the applicant is / was a Party to any Criminal proceedings. If yes, furnish detailed information.	

I do hereby solemnly and sincerely affirm that the statement made and the information furnished above are true. Should it however be found that any information furnished herein is untrue in material particulars, I realise that I am liable to criminal prosecution and I am also agreeable to forego the claim for public services under the State Government.

PLACE : SIGNATURE OF THE CANDIDATE.

DATE :

PR-176

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ಅಧ್ಯಕ್ಷರು, ಆಯ್ಕೆ ಪ್ರಾಧಿಕಾರ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು

ಅಧಿಸೂಚನೆ

ಸಂ:ಗ್ರಾಲೆಸಿ/90/2010-11, ದಿನಾಂಕ: 2-4-2011

ವಿಷಯ: ಮೈಸೂರು ಜಿಲ್ಲಾ, ಕಂದಾಯ ಘಟಕದ, ತಾಲ್ಲೂಕುಗಳಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂ: ಕಂ.ಇ. 299 ಬಿ.ಎಸ್.ಸಿ. 2006 ದಿನಾಂಕ 3-2-2009 ಮತ್ತು 24-7-2009
2. ಸರ್ಕಾರದ ಪತ್ರ ಸಂ. ಕಂ.ಇ.04 ಬಿ.ಎಸ್.ಸಿ. 2011 ದಿನಾಂಕ 25-2-2011

ಮೈಸೂರು ಜಿಲ್ಲಾ, ಕಂದಾಯ ಘಟಕದ, ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಖಾಲಿ ಹುದ್ದೆಗಳ ವಿವರ

ಹುದ್ದೆಯ ಹೆಸರು: ಗ್ರಾಮಲೆಕ್ಕಿಗರು **ಒಟ್ಟು ಖಾಲಿ ಹುದ್ದೆ: 27 (ಇಪ್ಪತ್ತೇಳು)** **ಹಿಂಬಾಕಿ 01**

ಕ್ರಮ ಸಂಖ್ಯೆ	ವರ್ಗೀಕರಣ	ಹಿಂಬಾಕಿ	ಪ.ಜಾ	ಪ.ಪಂ	ವ-1	ವ-2ಎ	ವ-2ಬಿ	ವ-3ಎ	ವ-3ಬಿ	ಸಾ.ಅ	ಒಟ್ಟು
1	ಸಾಮಾನ್ಯ	–	1	–	–	1	–	–	–	3	5
2	ಮಹಿಳೆ	–	1	1	–	1	–	1	1	4	9
3	ಗ್ರಾಮೀಣ	–	1	–	1	2	1	–	–	3	8
4	ಮಾಜಿ ಸೈನಿಕ	–	1	–	–	–	–	–	–	2	3
5	ಕನ್ನಡ ಮಾಧ್ಯಮ	–	–	–	–	–	–	–	–	–	0
6	ಯೋಜನಾ ನಿರಾಶ್ರಿತ	–	–	–	–	–	–	–	–	–	0
7	ಅಂಗವಿಕಲರು	1 S.C. P.H. (HH)		–	–	–	–	–	–	1	2
	ಒಟ್ಟು:	**1**	**4**	**1**	**1**	**4**	**1**	**1**	**1**	**13**	**27**

*ರೋಸ್ಟರ್ ಪಾಯಿಂಟ್ 36 ರಿಂದ ಮುಂದುವರೆಸಲಾಗಿದೆ.

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 11-4-2011 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 10-5-2011

ಸಂ:1 ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ:

ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ಸಿ.ಬಿ.ಎಸ್.ಇ./ಐ.ಸಿ.ಎಸ್.ಇ. ರವರು ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು.. ಈ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು.

ಸಂ:2 ಹುದ್ದೆಗೆ ನಿಗದಿಪಡಿಸಿರುವ ವೇತನಶ್ರೇಣಿ: ರೂ:5800–10500

ಸಂ:3 ಹುದ್ದೆಗೆ ನಿಗದಿಪಡಿಸಿರುವ ವಯೋಮಿತಿ:

ಕ್ರಮ ಸಂಖ್ಯೆ	ವರ್ಗ	ವಯೋಮಿತಿ
1	ಸಾಮಾನ್ಯ	18–35 ವರ್ಷ
2	ಪ್ರವರ್ಗ–2ಎ/2ಬಿ/3ಎ/3ಬಿ	18–38 ವರ್ಷ
3	ಪ್ರವರ್ಗ–1 ಪ.ಜಾ/ಪ.ವರ್ಗ	18–40 ವರ್ಷ

ಸಂ:4 ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಶುಲ್ಕ:

ಕ್ರಮ ಸಂಖ್ಯೆ	ವರ್ಗ	ಶುಲ್ಕ	ಪಾವತಿಸುವ ವಿಧಾನ
1	ಸಾಮಾನ್ಯ	ರೂ:200.00	ಚಲನ್ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯೂನಿವರ್ಸಿಟಿ ಬ್ರಾಂಚ್‌ನ ಖಾತೆ ಸಂಖ್ಯೆ 64076363630 ಕ್ಕೆ ಜಮಾ ಮಾಡತಕ್ಕದ್ದು.
2	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಪ್ರ.ವ–1, ಮಾಜಿ ಸೈನಿಕ ಹಾಗೂ ಅಂಗವಿಕಲ ಮತ್ತು ಮಹಿಳಾ ಅಭ್ಯರ್ಥಿಗಳಿಗೆ	ರೂ:100.00	

ಸಂ:5 ಹುದ್ದೆಯ ಆಯ್ಕೆ ವಿಧಾನ:

ಅಭ್ಯರ್ಥಿಯು ದ್ವಿತೀಯ ಪಿ.ಯು.ಸಿ./ಸಿ.ಬಿ.ಎಸ್.ಇ/ಐ.ಸಿ.ಎಸ್.ಇ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡವಾರು ಮೆರಿಟ್ ಆಧಾರದಲ್ಲಿ ಮೀಸಲಾತಿಗೆ ಅನುಗುಣವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: RD.299 BSC 2009 ದಿನಾಂಕ: 3–2–2009 ರನ್ವಯ ಆಯ್ಕೆ ಮಾಡಲಾಗುವುದು

ಸಂಖ್ಯೆ:6 ನಿಬಂಧನೆಗಳು:

1. ಅರ್ಹ ಅಭ್ಯರ್ಥಿಗಳು ONLINE ಮೂಲಕ ಮಾತ್ರ ಅರ್ಜಿ ಸಲ್ಲಿಸುವುದು. ಕಂಪ್ಯೂಟರ್ ವೆಬ್ ಸೈಟ್‌ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿದ ತರುವಾಯ ಅಭ್ಯರ್ಥಿಯು ಚಲನ್ ಅನ್ನು ಪಡೆದು ಸಂಬಂಧಿಸಿದ ಬ್ಯಾಂಕಿನಲ್ಲಿ ಪಾವತಿಸಿ ಚಲನ್ ಸಂಖ್ಯೆ ಹಾಗೂ ದಿನಾಂಕವನ್ನು ನಮೂದಿಸಿದ ನಂತರವೇ ಅರ್ಜಿಯು ಸ್ವೀಕೃತವಾಗುವುದು.
2. ಅಭ್ಯರ್ಥಿಯು ಎಲ್ಲಾ ಪ್ರಮಾಣಪತ್ರಗಳನ್ನು ಮತ್ತು ಅಂಕಪಟ್ಟಿಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು.
3. ನೇಮಕಾತಿ ಹೊಂದಿದ ಅಭ್ಯರ್ಥಿಗಳು, ಎರಡು (02)ವರ್ಷಗಳ ಪರಿವೀಕ್ಷಣಾವಧಿ ಪೂರೈಸುವುದು ಕಡ್ಡಾಯವಾಗಿರುತ್ತದೆ.
4. ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಇಲಾಖಾ ಮುಖ್ಯಸ್ಥರ ನಿರಾಕ್ಷೇಪಣಾ ಪತ್ರವನ್ನು ಹೊಂದಿರತಕ್ಕದ್ದು.
5. ಜನ್ಮ ದಿನಾಂಕವನ್ನು ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಆಧಾರದ ಮೇಲೆಯೇ ಸಲ್ಲಿಸತಕ್ಕದ್ದು.
6. ಮಾಜಿ ಸೈನಿಕ ಮೀಸಲಾತಿ ಹುದ್ದೆಗೆ ಸಂಬಂಧಿಸಿದಂತೆ, ಸೈನಿಕ ಸೇವೆಯಿಂದ ಬಿಡುಗಡೆ ಹೊಂದಿರುವ ಪ್ರಮಾಣಪತ್ರವನ್ನು ಹೊಂದಿರತಕ್ಕದ್ದು.
7. ಅಂಗವಿಕಲ ಮೀಸಲಾತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂ: ಸಿಆಸುಇ.115 ನೇಸನಿ.2005 ದಿ: 19–11–2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯು ನೀಡುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.
8. ಅಭ್ಯರ್ಥಿಯು ಜಾತಿ ಪ್ರಮಾಣ ಪತ್ರವನ್ನು ಸರ್ಕಾರದ ಅದೇಶ ಸಂ:ಸಕಇ/132/ಎಸ್ಎಡಿ/97 ದಿನಾಂಕ 8–2–2000 ರಲ್ಲಿ ನಿಗದಿಪಡಿಸಿರುವಂತೆ ನಮೂನೆಯಲ್ಲಿ ತಾಲ್ಲೂಕು ತಹಸೀಲ್ದಾರರಿಂದ ಪಡೆದಿರತಕ್ಕದ್ದು.
9. ಗ್ರಾಮೀಣ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ದಿನಾಂಕ:13–2–2001ರ ಸರ್ಕಾರದ ಆದೇಶ ಸಂ: ಸಿ.ಆ.ಸು.ಇ.8/ಸೇನನಿ/2001ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲುರುಜುವನ್ನು ಪಡೆದ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು.
10. ಇಬ್ಬರು ಗಣ್ಯ ವ್ಯಕ್ತಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣಪತ್ರ ಹೊಂದಿರತಕ್ಕದ್ದು.
11. ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಅಭ್ಯರ್ಥಿಯು ಹೊಂದಿರಬೇಕು.
12. ಪ್ರಕಟಿಸಿರುವ ಹುದ್ದೆಗಳನ್ನು ಹೆಚ್ಚು ಮಾಡುವ ಅಥವಾ ಕಡಿಮೆ ಮಾಡುವ ಹಕ್ಕು ನೇಮಕಾತಿ ಪ್ರಾಧಿಕಾರಕ್ಕೆ ದತ್ತವಾಗಿರುತ್ತದೆ.
13. ತಪ್ಪು ಮಾಹಿತಿ ಒದಗಿಸಿದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು
14. ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿರುವ ದಿನಾಂಕವು ಸಾರ್ವಜನಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆ ದಿನವನ್ನು ಅರ್ಜಿ ಸ್ವೀಕರಿಸಲು ಕೊನೆ ದಿನಾಂಕವಾಗಿರುತ್ತದೆ.

15. ಈ ಅಧಿಸೂಚನೆ ಅನ್ವಯ ನೇಮಕಾತಿ ಹೊಂದುವ ಅಭ್ಯರ್ಥಿಗಳು ಜಿಲ್ಲೆಯ ಯಾವುದೇ ತಾಲ್ಲೂಕುಗಳಲ್ಲಾದರೂ ಸೇವೆ ಸಲ್ಲಿಸಲು ಬದ್ದರಾಗಿರಬೇಕು.

16. ಅರ್ಜಿಯನ್ನು ONLINE ಮೂಲಕ ಸಲ್ಲಿಸತಕ್ಕದ್ದು. ಆನ್‌ಲೈನ್ ವಿಳಾಸ http://mysore-va.kar.nic.in or www.mysore.nic.in (Click on Recruitment)ಆನ್‌ಲೈನ್ ಅರ್ಜಿ ದಿ: 11–4–2011 ರಿಂದ ಲಭ್ಯವಿರುತ್ತದೆ ಹಾಗೂ ದಿನಾಂಕ 10–5–2011 ರ ಸಂಜೆ 5–30 ರವರೆಗೆ ಮಾತ್ರ ಲಭ್ಯವಾಗುವುದು. ONLINE ಹೊರತುಪಡಿಸಿ ಇತರೆ ಯಾವುದೇ ವಿಧದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

17. ಅಭ್ಯರ್ಥಿಯು ಅರ್ಜಿ ಶುಲ್ಕವನ್ನು ಬ್ಯಾಂಕಿನಲ್ಲಿ ಚಲನ್ ಮೂಲಕ ಪಾವತಿಸಿ ಚಲನ್ ಸಂಖ್ಯೆ ಹಾಗೂ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ನಮೂದಿಸದಿದ್ದಲ್ಲಿ ಅರ್ಜಿಯು ತಿರಸ್ಕೃತಗೊಳ್ಳುತ್ತದೆ.

18. ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದಲ್ಲಿ ಮೀಸಲಾತಿಗನುಗುಣವಾಗಿ ಪರಿಶೀಲನಾ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ನಿಗದಿತ ದಿನಾಂಕದಂದು ಮೂಲ ದಾಖಲಾತಿಗಳ ಪರಿಶೀಲನೆಗಾಗಿ ಹಾಜರಾಗಬೇಕಾಗಿರುತ್ತದೆ.

19. ನಿಗದಿತ ದಿನದಂದು ದಾಖಲಾತಿಗಳ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು ಅನರ್ಹಗೊಳ್ಳುತ್ತಾರೆ ಮತ್ತು ಪರಿಶೀಲನಾ ಪಟ್ಟಿಯ ಅಭ್ಯರ್ಥಿಗಳಿಗೆ ಯಾವುದೇ ಪ್ರತ್ಯೇಕ ಸೂಚನಾ ಪತ್ರವನ್ನು ಈ ಕಾರ್ಯಾಲಯದಿಂದ ಕಳುಹಿಸಲಾಗುವುದಿಲ್ಲ.

20. ಅರ್ಜಿಯಲ್ಲಿ ಕೇಳಿರುವ ಪೂರ್ಣ ಮಾಹಿತಿಯನ್ನು ಭರ್ತಿ ಮಾಡಿಲ್ಲದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

ಅಧ್ಯಕ್ಷರು,
ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ ಮತ್ತು ಜಿಲ್ಲಾಧಿಕಾರಿ,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.169

OFFICE OF THE SUPERINTENDENT OF POLICE CHIKKABALLAPURA DISTRICT, CHIKKABALLAPURA, NOTIFICATION NO.M.V.C.19/2010-11, DATED:07-04-2011

Sub: - Disposal of Condemned Jeeps Reg.

Ref: 1. Govt Order No. HD / 16 / EMV / 2010, Dated:02-02-2011.
2. DG & IGP, KS, Bangalore Order No.MT(1)40/09-10, Dtd:21-02-2011.
3. This Office letter even No.Dtd:25-11-09.

It is brought to the Notice of the public that the following quantity of condemned Jeeps are Scheduled to be auctioned on tender-cum-auction basis on 10- 06-2011 at 11 Am in the premises of DAR, Chikkaballapura. Hence, the sealed tenders are requisitioned from the interested buyers along with the E.M.D., of Rs. 5,000/- (Rupees five thousand only) through DD/Cash. The same will be received up to 09-06-11 at 5:00 PM. The details of condemned Jeeps are as follows.

JEEPS

01. KA-07-G-13	-	MAHENDRA JEEP	- 1991	MODEL
02. KA-07-G-57	-	MAHENDRA JEEP	- 1994	MODEL
03. KA-07-G-63	-	MAHENDRA JEEP	- 1994	MODEL

Terms and conditions of sale etc., can be obtained at this office on any working days during office hours. The interested persons may also inspect the said items at DAR, Chikkaballapura on any working days between 10:00Am to 5:00 Pm.

Superintendent of Police,
Chikkaballapura District.

PR-177

ಸಹಾಯಕ ಕೃಷಿ ನಿರ್ದೇಶಕರು (ಬೀಜ ಪರೀಕ್ಷಾ ಪ್ರಯೋಗಾಲಯ) ಹೆಬ್ಬಾಳ ಕಛೇರಿಯ
ಟೆಂಡರ–ಕಂ–ಬಹಿರಂಗ ಹರಾಜಿನ ದಿನಾಂಕ:15–6–2011 ರ ಪ್ರಕಟಣೆ.

ವಿಷಯ: ಸಹಾಯಕ ಕೃಷಿ ನಿರ್ದೇಶಕರು (ಬೀಜ ಪರೀಕ್ಷಾ ಪ್ರಯೋಗಾಲಯ) ಹೆಬ್ಬಾಳ ಕಛೇರಿಯ ಅನುಪಯುಕ್ತ ಜಡವಸ್ತುಗಳು ಹಾಗು ಪ್ರಯೋಗಾಲಯದ ಉಪಕರಣಗಳನ್ನು ಟೆಂಡರ–ಕಂ–ಬಹಿರಂಗ ಹರಾಜಿನಲ್ಲಿ ದಿನಾಂಕ:15–6–2011 ರಂದು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: ಕೃಷಿ ಆಯುಕ್ತರು, ಬೆಂಗಳೂರು ಇವರ ಪತ್ರ :ಸಂಖ್ಯೆ/ಸಾಮಾನ್ಯ/ಜವ/ಅನುಪ/ 73/09–10 ದಿನಾಂಕ:31–1–2011.

ಕೃಷಿ ಆಯುಕ್ತರು ಬೆಂಗಳೂರು ಇವರು ಉಲ್ಲೇಖಿತ ಪತ್ರದಲ್ಲಿ ನೀಡಿರುವ ಅನುಮತಿ ಆದೇಶದ ಮೇರೆಗೆ ಸಹಾಯಕ ಕೃಷಿ ನಿರ್ದೇಶಕರು (ಬೀಜ ಪರೀಕ್ಷಾ ಪ್ರಯೋಗಾಲಯ) ಹೆಬ್ಬಾಳ ಕಛೇರಿಯಲ್ಲಿರುವ ಈ ಕೆಳಗೆ ಕಾಣಿಸಿದ ಹಳೆಯ ಜಡವಸ್ತುಗಳು ಹಾಗು ಪ್ರಯೋಗಾಲಯದ ಉಪಕರಣಗಳನ್ನು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ಇರುವ ಸ್ಥಳದಲ್ಲಿಯೇ ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಈ ಕೆಳಗೆ

ವಿವರಿಸುವ ಷರತ್ತುಗಳಿಗೆ ಒಳಪಟ್ಟು ವಿಲೇವಾರಿ ಮಾಡಲಾಗುವುದು.ಇಚ್ಚೆಯುಳ್ಳ ಖರೀದಿದಾರರು ಟೆಂಡರ್–ಕಂ–ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಬಿಡ್ ಸವಾಲು ಮಾಡಬಹುದು.

ಕ್ರ.ಸಂ.	ವಸ್ತುಗಳು	ಸಂಖ್ಯೆ	ಲಾಟ್ ಸಂಖ್ಯೆ
1.	ಜಡವಸ್ತುಗಳು & ಪ್ರಯೋಗಾಲಯದ ಉಪಕರಣಗಳು	32	1

ಹರಾಜು ನಡೆಯುವ ಸ್ಥಳ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ & ವೇಳೆ	ಹರಾಜು ದಿನಾಂಕ ವೇಳೆ	ಬಹಿರಂಗ ಹರಾಜಿನ ಸ್ಥಳ	ಟೆಂಡರ್ ತೆರೆಯುವ ದಿನಾಂಕ ವೇಳೆ
ಸಹಾಯಕ ಕೃಷಿ ನಿರ್ದೇಶಕರ ಕಛೇರಿ (ಬೀಜ ಪರೀಕ್ಷಾ ಪ್ರಯೋಗಾಲಯ) ಹೆಬ್ಬಾಳ, ಬೆಂಗಳೂರು–24	14–06–2011 ಅಪರಾಹ್ನ 5–00 ಗಂಟೆಗೆ	15–06–2011 ಪೂರ್ವಾಹ್ನ 11.30 ಗಂಟೆಗೆ	ಸಹಾಯಕ ಕೃಷಿ ನಿರ್ದೇಶಕರ ಕಛೇರಿ (ಬೀಜ ಪರೀಕ್ಷಾ ಪ್ರಯೋಗಾಲಯ) ಹೆಬ್ಬಾಳ, ಬೆಂಗಳೂರು–24	ಹರಾಜಿನ ನಂತರ ಟೆಂಡರನ್ನು ತೆರೆಯಲಾಗುವುದು

ದಿನಾಂಕ:15–06–2011 ರಂದು ಟೆಂಡರ–ಕಂ–ಬಹಿರಂಗ ಹರಾಜು ಮಾಡಲಿರುವ ಜಡವಸ್ತುಗಳು ಹಾಗೂ ಪ್ರಯೋಗಾಲಯದ ಉಪಕರಣಗಳ ವಿವರವು ಈ ಕೆಳಕಂಡಂತಿರುತ್ತದೆ

ಕ್ರ. ಸಂಖ್ಯೆ	ಸಾಮಾಗ್ರಿಗಳ ವಿವರ	ಪ್ರಮಾಣ	ಷರಾ
1	ಟೀಕ್ ವುಡ್ ಟೇಬಲ್	1	ಟೆಂಡರ್–ಕಂ–ಬಹಿರಂಗ ಹರಾಜು
2	ಸ್ಕ್ರೂ ಡ್ರೈವರ್	1	
3	ವಾಲ್ ಕ್ಲಾಕ್	3	
4	ಕ್ಯಾಲ್ಕುಲೇಟರ್	1	
5	ಕೆರಾಯ್ ಬ್ಯಾಲೆನ್ಸ್	1	
6	ಡೆಸಿಮಲ್ ಬ್ಯಾಲೆನ್ಸ್	1	
7	ಕೆ–ರಾಯ್ ಟಾಪ್ ಪ್ಯಾನ್ ಬ್ಯಾಲೆನ್ಸ್ (ಎಲೆಕ್ಟ್ರಿಕಲ್ ಡಿಜಿಟಲ್ ಬ್ಯಾಲೆನ್ಸ್)	1	
8	ಯಮಟೊ ಪ್ಯಾನ್ ಬ್ಯಾಲೆನ್ಸ್	1	
9	ಡಿಸ್ಸೆಕ್ಷನ್ ಇನ್‌ಸ್ಟ್ರೂಮೆಂಟ್ ಬಾಕ್ಸ್	2	
10	ಕ್ರ್ಯೂಸಿಬಲ್ ಟಾಂಗ್ಸ್	1	
11	ಫೋರ್ ಸೆಪ್ಸ್ ಕರ್ವುಡ್ 4"	1	
12	ಸಿಜರ್ಸ್	3	
13	ಕಂಡಕ್ಟಿವಿಟಿ ಬ್ರೀಡ್ಜ್ (ತೋಷ್)	1	
14	ಎಲಿಕೋ ಡಿಜಿಟಲ್ ಪಿ. ಹೆಚ್ ಮೀಟರ್	1	
15	ಆಟೋ ಮ್ಯಾಟಿಕ್ ಸೀಡ್ ಅನಾಲೈಸರ್	1	
16	ಎನಾಮಲ್ಡ್ ಟ್ರೇಸ್ (Rectangular)	6	
17	ಟೀಕ್ ವುಡ್ ಪ್ಯೂರಿಟಿ ಬಾಕ್ಸ್	2	
18	ಟೆಸ್ಟ್ ಸೀವ್ಸ್ (ಮೆಶ್ ಟಿ–ಎಸ್–30)	4	
ಒಟ್ಟು		**32**	

ಷರತ್ತುಗಳು:

1) ಜಡವಸ್ತುಗಳು ಹಾಗು ಪ್ರಯೋಗಾಲಯದ ಉಪಕರಣಗಳಿಗೆ ಟೆಂಡರ್–ಕಂ–ಹರಾಜಿಗೆ ಸಲ್ಲಿಸುವುವರು ಬಿಳಿಯ ಹಾಳೆಯಲ್ಲಿ ಗರಿಷ್ಠ ಮೊತ್ತವನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ನಮೂದಿಸಿದ ರೂ.5000/–ಮೌಲ್ಯದ ಡಿ.ಡಿ.ಯನ್ನು ಲಗತ್ತಿಸಿ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ಜಡವಸ್ತುಗಳು ಹಾಗು ಪ್ರಯೋಗಾಲಯದ ಉಪಕರಣಗಳ ಹರಾಜಿಗೆ ಸಂಭಂದಿಸಿದ್ದಾಗಿದೆ ಎಂಬುದಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು. ಮತ್ತು ಟೆಂಡರ್‌ದಾರರು ವಿಳಾಸವನ್ನು ಸ್ಪಷ್ಟವಾಗಿ ಬರೆದು ಸಲ್ಲಿಸಬೇಕು.

ಡಿ.ಡಿ.ಇಲ್ಲದಿರುವ ಟೆಂಡರನ್ನು ಮಾನ್ಯ ಮಾಡಲಾಗುವುದಿಲ್ಲವೆಂಬುದಾಗಿ ಸೂಚಿಸಿದೆ. ಟೆಂಡರ್‌ನ ಕವರಿನ ಮೇಲೆ ಜಡವಸ್ತುಗಳು ಹಾಗು ಪ್ರಯೋಗಾಲಯದ ಉಪಕರಣಗಳ ಹರಾಜಿಗೆ ಸಂಭಂದಿಸಿದ್ದಾಗಿದೆ ಎಂಬುದಾಗಿ ದಪ್ಪಅಕ್ಷರಗಳಲ್ಲಿ ನಮೂದಿಸುವುದು.

2) ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಜಡವಸ್ತುಗಳು ಹಾಗೂ ಪ್ರಯೋಗಾಲಯದ ಉಪಕರಣಗಳನ್ನು ಈಗ ಇದ್ದಪರಿಸ್ಥಿತಿಯಲ್ಲಿಯೇ ಹರಾಜು ಮಾಡಲಾಗುವುದು. ಹರಾಜು ಮಾಡಲಾಗುವ 05 ದಿನಗಳ ಮುಂಚಿತವಾಗಿಯೆ ಕಛೇರಿ ಕೆಲಸದ ದಿನಗಳಲ್ಲಿ ಕಛೇರಿಯ ವೇಳೆಯಲ್ಲಿ ವಿಕ್ಷಿಸಿ ಈ ಕಛೇರಿಯಲ್ಲಿ ಪ್ರಕಟಣೆಗೊಳಿಸಿರುವ ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆಯ ಮಾಹಿತಿಯನ್ನು ತಿಳಿದುಕೊಳ್ಳಬೇಕೆಂದು ಸೂಚಿಸಿದೆ.

ಸಹಾಯಕ ಕೃಷಿ ನಿರ್ದೇಶಕರು

ಪಿ.ಆರ್.174 ಬೀಜ ಪರೀಕ್ಷಾ ಪ್ರಯೋಗಾಲಯ, ಹೆಬ್ಬಾಳ, ಬೆಂಗಳೂರು.

ಕಮಾಂಡೆಂಟ್‌ರವರ ಕಛೇರಿ, 4ನೇ ಪಡೆ, ಕ.ರಾ.ಮಿ.ಪೊ. ಬೆಂಗಳೂರು–560 034

ಸಂಖ್ಯೆ: ವಾಸಾವಿ/4ನೇಪಡೆ/14/2010–11, ದಿನಾಂಕ:29.03.2011

ವಿಷಯ: ನಿರುಪಯುಕ್ತಗೊಳಿಸಿರುವ 2 ಸಂಖ್ಯೆ ಪೊಲೀಸ್ ವಾಹನಗಳನ್ನು ದಿನಾಂಕ:30.04.2011 ಟೆಂಡರ್ ಕಂ ಬಹಿರಂಗ ಹರಾಜು ಮಾಡುವ ಬಗ್ಗೆ.

ಉಲ್ಲೇಖ: 1) ಮಾನ್ಯ ಡಿಜಿ ಮತ್ತು ಐಜಿಪಿ, ಕ.ರಾ. ಬೆಂಗಳೂರುರವರ ಪತ್ರ ಸಂಖ್ಯೆ: ವಾಸಾ(1)/40/2009–10, ದಿನಾಂಕ:21.02.2011.

2) ಮಾನ್ಯ ಎಡಿಜಿಪಿ. ಕೆ.ಎಸ್.ಆರ್.ಪಿ. ಬೆಂಗಳೂರು ರವರ ಪತ್ರ ಸಂಖ್ಯೆ: ವಾಸಾವಿ/274/2006–07, ದಿನಾಂಕ:14.03.2011.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರಗಳಿಗೆ ಸಂಬಂಧಿಸಿದಂತೆ, ಕೆ.ಎಸ್.ಆರ್.ಪಿ. 4ನೇ ಪಡೆ, ಕೋರಮಂಗಲ, ಬೆಂಗಳೂರು ಘಟಕದಲ್ಲಿರುವ ನಿರುಪಯುಕ್ತ 2 ಸಂಖ್ಯೆ ಪೊಲೀಸ್ ವಾಹನಗಳನ್ನು ಈ ಕೆಳಕಂಡ ವಿವರದ ಪ್ರಕಾರ ಸರ್ಕಾರಿ ನಿಯಮ ಹಾಗೂ ನಿಬಂಧನೆಗಳಂತೆ, ದಿನಾಂಕ:30.04.2011 ರಂದು ಬೆಳಿಗ್ಗೆ 11.00 ಗಂಟೆಗೆ 4ನೇ ಪಡೆ, ಕೆ.ಎಸ್.ಆರ್.ಪಿ. ಕೋರಮಂಗಲ, ಬೆಂಗಳೂರು–560 034 ಈ ಘಟಕದ ವಾಹನ ಸಾರಿಗೆ ವಿಭಾಗದ ಆವರಣದಲ್ಲಿ ಟೆಂಡರ್ ಕಮ್ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ವಾಹನ ಸಾರಿಗೆ ಅಧಿಕಾರಿಯವರ ಕಛೇರಿ 4ನೇ ಪಡೆ ಕೆ.ಎಸ್.ಆರ್.ಪಿ. ಕೋರಮಂಗಲ ಬೆಂಗಳೂರು–560 034 ರವರಲ್ಲಿ ಸಂಪರ್ಕಿಸಬಹುದು.

ಹರಾಜು ಮಾಡಲು ಉದ್ದೇಶಿಸಿರುವ ನಿರುಪಯುಕ್ತ ವಾಹನಗಳ ವಿವರ

ಕ್ರ. ಸಂ.	ವಾಹನದ ನೋಂದಣಿ ಸಂ.	ಉತ್ಪಾದಕರು	ಉತ್ಪಾದನ ವರ್ಷ	ವಾಹನದ ವಿಧ	ಇಂಧನ ಬಳಕೆ	ಷರಾ
1.	ಕೆಎ–16–ಜಿ–72	ಟಾಟಾ–807 ವ್ಯಾನ್	1992	ಟಾಟಾ ವ್ಯಾನ್	ಡೀಸೆಲ್	ಇರುವ ಸ್ಥಿತಿಯಲ್ಲಿ
2.	ಕೆಎ–01–ಜಿ–1378	ಮಹೇಂದ್ರ ಕಮಾಂಡರ್ ಜೀಪು	1994	ಮಹೇಂದ್ರ ಜೀಪು	ಡೀಸೆಲ್	ಇರುವ ಸ್ಥಿತಿಯಲ್ಲಿ

ಕಮಾಂಡೆಂಟ್,

ಪಿ.ಆರ್.172 4ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು–34.

ಕಂದಾಯ ಇಲಾಖೆ

ಜಿಲ್ಲಾಧಿಕಾರಿಯವರ ಕಛೇರಿ ಉಡುಪಿ ಜಿಲ್ಲೆ, ಉಡುಪಿ

ಅಧಿಸೂಚನೆ

ಕ್ರಮ ಸಂಖ್ಯೆ: ವಿಎಎಸ್.ಸಿಆರ್ 42/2010–11, ದಿನಾಂಕ:20.04.2011

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಉಡುಪಿ ಜಿಲ್ಲಾ ಘಟಕದಲ್ಲಿ ಬರುವ ತಾಲ್ಲೂಕುಗಳಲ್ಲಿ ತೆರವಾಗಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವೆನ್ಯೂ ಸಬೊರ್ಡಿನೇಟ್ ಬ್ರಾಂಚ್) (ಕೇಡರ್ ಎಂಡ್ ರಿಕ್ರ್ಯೂಟ್ ಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009 ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ: ಕಂಇ04ಬಿಎಸ್‌ಸಿ 2011 ದಿನಾಂಕ:25.02.2011 ರಲ್ಲಿ ಅನುಮೋದನೆ ನೀಡಿದೆ. ಅದರಂತೆ ಗ್ರಾಮಲೆಕ್ಕಿಗರ ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಗಿನಂತಿದೆ:

2. ಹುದ್ದೆಗಳ ವರ್ಗೀಕರಣ: (ರೋಸ್ಟರ್ ಬಿಂದು 77 ರಿಂದ 93ರವರೆಗೆ)

ಕ್ರ. ಸಂ.	ವರ್ಗೀಕರಣದ ವಿವರ	ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗ ವಿಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಒಟ್ಟು
1.	ಪರಿಶಿಷ್ಟ ಜಾತಿ	–	1	1	–	–	1	3
2.	ಪರಿಶಿಷ್ಟ ಪಂಗಡ	–	–	–	–	–	–	–
3.	ಪ್ರವರ್ಗ–I	–	–	–	1	–	–	1
4.	ಪ್ರವರ್ಗ– II A	–	1	1	–	–	1	3

ಕ್ರ. ಸಂ.	ವರ್ಗೀಕರಣದ ವಿವರ	ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗ ವಿಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಒಟ್ಟು
5.	ಪ್ರವರ್ಗ– II B	–	–	–	1	–	–	1
6.	ಪ್ರವರ್ಗ– III A	–	–	–	–	–	–	–
7.	ಪ್ರವರ್ಗ– III B	–	–	–	1	–	–	1
8.	ಸಾಮಾನ್ಯ ಅರ್ಹತೆ	2	2	2	1	1	–	8
9.	ಜುಮ್ಲಾ	2	4	4	4	1	2	17

ವೇತನ ಶ್ರೇಣಿ: ರೂ.5800–100–6000–125–6500–150–7100–175–7800–200–8600–225–9500–250–10500

4. ವಯೋಮಿತಿ: ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು.

	ಕನಿಷ್ಠ	ಗರಿಷ್ಠ
ಪ.ಜಾ/ಪ.ಪಂ/ಪ್ರ–1	18 ವರ್ಷ	40 ವರ್ಷ
2ಎ, 2ಬಿ, 3ಎ, 3ಬಿ	18 ವರ್ಷ	38 ವರ್ಷ
ಸಾಮಾನ್ಯ ವರ್ಗ	18 ವರ್ಷ	35 ವರ್ಷ

3. ಶೈಕ್ಷಣಿಕ ವಿದ್ಯಾರ್ಹತೆ: ಪಿ.ಯು.ಸಿ. ಪರೀಕ್ಷೆ ಅಥವಾ CBSE ಅಥವಾ ICSE ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಅರ್ಜಿ ತುಂಬಲು ಪ್ರಾರಂಭ ದಿನಾಂಕ: 20.04.2011

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 19.05.2011

ಅರ್ಜಿ ಶುಲ್ಕ:

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1	ರೂ.100–00
ಸಾಮಾನ್ಯ ವರ್ಗ, 2ಎ, 2ಬಿ, 3ಎ, 3ಬಿ ವರ್ಗಕ್ಕೆ	ರೂ.200–00

1. ಅರ್ಜಿಸಲ್ಲಿಸುವ ವಿಧಾನ: ಅರ್ಜಿಗಳನ್ನು ಆನ್–ಲೈನ್ (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದಾಗಿದೆ. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅಭ್ಯರ್ಥಿಯು ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಯು ಇಲಾಖೆಯ ಅಧಿಕೃತ ವೆಬ್‌ಸೈಟ್ Udupi-va.kar.nic.in ಅನ್ನು ನೋಡತಕ್ಕದ್ದು.

ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ:0820–2524924, 0820–2524925.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇಮಕಾತಿ ಪ್ರಾಧಿಕಾರ,
ಉಡುಪಿ ಜಿಲ್ಲೆ, ಉಡುಪಿ.

ಪಿ.ಆರ್.180

ಜಿಲ್ಲಾ ಪೊಲೀಸ್ ಕಾರ್ಯಾಲಯ, ಗದಗ ಜಿಲ್ಲೆ, ಗದಗ

ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ: ಎಂ.ಟಿ./1118/2011–12, ದಿನಾಂಕ:08.04.2011

ವಿಷಯ: ಗದಗ ಜಿಲ್ಲೆಯ ಸಶಸ್ತ್ರ ಮೀಸಲು ಪಡೆಯ ವಾಹನ ಸಾರಿಗೆ ವಿಭಾಗದಲ್ಲಿರುವ ನಿರುಪಯುಕ್ತ ವಾಹನ ಸಂಖ್ಯೆ: ಕೆಎ–25/ಜಿ–78 ನೇದ್ದನ್ನು ಖಾಲಿ ವಾಹನದ ತೂಕದ ಆಧಾರದ ಮೇರೆಗೆ ಟೆಂಡರ್ ಕಂ. ಬಹಿರಂಗ ಹರಾಜು ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/142/ಶಿವಾನಿ/2000, ದಿನಾಂಕ:05.01.2001.

2) ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ/19/ಇಎಂವಿ/2009, ದಿನಾಂಕ:12.05.2009.

3) ಪ್ರಧಾನ ಕಛೇರಿ ಆದೇಶ ಸಂಖ್ಯೆ: ವಾಸಾ(1)/18/08–09 (ವಾಲ್ಯೂಂ–2), ದಿನಾಂಕ:03.12.2010.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಜಿಲ್ಲೆಯ ನಿರುಪಯುಕ್ತ ಪೊಲೀಸ್ ಜೀಪ್ ಸಂಖ್ಯೆ: ಕೆಎ–25/ಜಿ–78 ನೇದ್ದರ ನೊಂದಣಿಯನ್ನು ರದ್ದುಪಡಿಸಿ ಖಾಲಿ ವಾಹನದ ತೂಕದ ಆಧಾರದ ಮೇರೆಗೆ ಮಲ್ಲಸಮುದ್ರದಲ್ಲಿರುವ ಗದಗ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆಯ ವಾಹನ ಸಾರಿಗೆ ವಿಭಾಗದ ಆವರಣದಲ್ಲಿ ದಿನಾಂಕ:21.06.2011 ರಂದು ಬೆಳಗ್ಗೆ 11.00 ಗಂಟೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಟೆಂಡರ್ ಕಂ. ಬಹಿರಂಗ ಹರಾಜು ಮಾಡಲಾಗುವುದು.

ಹರಾಜಿನ ನಿಬಂಧನೆಗಳು:

1) ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಮೇಲ್ಕಾಣಿಸಿದ ನಿರುಪಯುಕ್ತ ವಾಹನವನ್ನು ಸದರಿ ವಾಹನದ ನೊಂದಣಿಯನ್ನು ರದ್ದುಪಡಿಸಿ ಖಾಲಿ ವಾಹನದ ತೂಕದ ಆಧಾರದ ಮೇರೆಗೆ ವಿಲೇವಾರಿ ಮಾಡುವದಿದ್ದು ಅತಿ ಹೆಚ್ಚಿನ ಬೆಲೆಗೆ ಬೇಡಿಕೆ ಬಂದರೆ ಮಾತ್ರ ವಾಹನವನ್ನು ಬಿಡ್‌ದಾರರಿಗೆ ನೀಡಲಾಗುವುದು.

2) ನಿರುಪಯುಕ್ತ ವಾಹನವನ್ನು "ಖಾಲಿ ವಾಹನದ ತೂಕದ ಆಧಾರದ ಮೇರೆಗೆ" ಹರಾಜು ಮಾಡಲಾಗುವುದು.

3) ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸುವ ಮುನ್ನ ರೂ.5,000/– (ರೂ.ಐದು ಸಾವಿರ ಮಾತ್ರ) ಗಳ ಠೇವಣಿಯನ್ನು ಹರಾಜು ನಡೆಯುವ ಸ್ಥಳದಲ್ಲಿ ಪಾವತಿಸತಕ್ಕದ್ದು. ಹರಾಜು ಪ್ರಾರಂಭವಾದ ನಂತರ ಸವಾಲುದಾರರಿಂದ ಠೇವಣಿ ಹಣವನ್ನು ಪಡೆಯಲಾಗುವುದಿಲ್ಲ. ಹಾಗೂ ಠೇವಣಿ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡುವುದಿಲ್ಲ.

4) ಆಸಕ್ತ ಬಿಡ್‌ದಾರರು ಕಛೇರಿ ವೇಳೆಯಲ್ಲಿ ನಿರುಪಯುಕ್ತ ವಾಹನವನ್ನು ಮಲ್ಲಸಮುದ್ರದಲ್ಲಿರುವ ಗದಗ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆಯ ವಾಹನ ಸಾರಿಗೆ ವಿಭಾಗದ ಆವರಣದಲ್ಲಿ ಪರಿಶೀಲಿಸಬಹುದಾಗಿದೆ.

5) ಪೊಲೀಸ್ ಅಧೀಕ್ಷಕರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಬಹಿರಂಗ ಹರಾಜು ನಡೆಸುವರು.

6) ಠೇವಣಿಯನ್ನು ತುಂಬಿದ ಸವಾಲುದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಠೇವಣಿ ಹಣವನ್ನು ನಗದು ರೂಪದಲ್ಲಿ ಮಾತ್ರ ಸ್ವೀಕರಿಸಲಾಗುತ್ತದೆ.

7) ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಬಿಡ್ ದರವನ್ನು ದಾಖಲಿಸಿಕೊಳ್ಳಲಾಗುತ್ತದೆ.

8) ಯಾರು ಅತೀ ಹೆಚ್ಚಿನ ದರವನ್ನು ಸೂಚಿಸುವರೋ ಅವರನ್ನು ಯಶಸ್ವಿ ಸವಾಲುದಾರರೆಂದು ಪರಿಗಣಿಸಲಾಗುವುದು.

9) ನಿರುಪಯುಕ್ತ ವಾಹನದ ಮೇಲೆ ನಿಯಮ ಪ್ರಕಾರ ಚಾಲ್ತಿಯಲ್ಲಿರುವ ಮಾರಾಟ ತೆರಿಗೆಯನ್ನು ವಿಧಿಸಲಾಗುವುದು.

10) ಹರಾಜು ಮುಗಿದ ತಕ್ಷಣವೇ ಯಶಸ್ವಿಯಾಗದ ಬಿಡ್‌ದಾರರ ಠೇವಣಿಯನ್ನು ಸ್ಥಳದಲ್ಲಿಯೇ ಹಿಂದಿರುಗಿಸಲಾಗುವುದು.

11) ಹರಾಜು ಮಾಡುವ ವೇಳೆಯಲ್ಲಿ ಯಾವುದೇ ವಾದ ವಿವಾದ ಉದ್ಭವಿಸಿದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್‌ರು, ಗದಗ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಯವರು ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ.

12) ಯಶಸ್ವಿಯಾದ ಸವಾಲುದಾರರು ಬಿಡ್ ದರದ ಶೇಕಡಾ 25 ರಷ್ಟು ಹಣವನ್ನು (ಠೇವಣಿ ಬಿಟ್ಟು) ಸ್ಥಳದಲ್ಲಿಯೇ ತುಂಬಬೇಕು. ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕರ್ನಾಟಕ ರಾಜ್ಯ, ಬೆಂಗಳೂರು ರವರು ಹರಾಜಿನಲ್ಲಿ ಅತೀ ಹೆಚ್ಚಿನ ಬಿಡ್‌ದಾರರ ಬಿಡ್‌ನ್ನು ಅನುಮೋದಿಸಿದ ನಂತರ ಬಾಕಿ ಹಣವನ್ನು ಮತ್ತು ತೆರಿಗೆಯನ್ನು ಸಂಪೂರ್ಣವಾಗಿ ಪಾವತಿ ಮಾಡಿದ ನಂತರ ಹರಾಜು ಮಾಡಲಾದ ನಿರುಪಯುಕ್ತ ವಾಹನವನ್ನು ಏಳು (7) ದಿವಸಗಳೊಳಗಾಗಿ ತಮ್ಮಸ್ವಂತ ವೆಚ್ಚದಿಂದ ತೆಗೆದುಕೊಂಡು ಹೋಗಲು ಒಪ್ಪಿಗೆ ನೀಡಲಾಗುವುದು. ತಪ್ಪಿದಲ್ಲಿ ಅವರು ತುಂಬಿದ ಶೇಕಡಾ 25 ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

13) ಹರಾಜಿನ ದಿನಾಂಕವನ್ನು ಬದಲಾಯಿಸುವ, ಹರಾಜಿನಲ್ಲಿ ಸವಾಲನ್ನು ಯಾವುದೇ ಕಾರಣಕ್ಕಾಗಿ ರದ್ದುಗೊಳಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಸೂಪರಿಂಟೆಂಡರ್‌ರು, ಗದಗ ರವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಯು ಹೊಂದಿರುತ್ತಾರೆ. ಇವರ ನಿರ್ಣಯವೇ ಅಂತಿಮವಾದದ್ದು.

ಪೊಲೀಸ್ ಸೂಪರಿಂಟೆಂಡೆಂಟರು,
ಗದಗ ಜಿಲ್ಲೆ, ಗದಗ.

ಪಿ.ಆರ್.168

ಪೊಲೀಸ್ ಇಲಾಖೆ

ಕಮಾಂಡೆಂಟ್‌ರವರ ಕಛೇರಿ, 1ನೇ ಪಡೆ ಕೆ.ಎಸ್.ಆರ್.ಪಿ. ಬೆಂಗಳೂರು

ಸಂಖ್ಯೆ: 80:ಲೆಕ್ಕ:4/ವಾಸಾವಿ/2008–09, ದಿನಾಂಕ:26.03.2011

ವಿಷಯ: 1ನೇ ಪಡೆ ಕೆ.ಎಸ್.ಆರ್.ಪಿ. ಘಟಕದ 06 (ಆರು) ಅನುಪಯುಕ್ತ ಪೊಲೀಸ್ ವಾಹನಗಳನ್ನು ಟೆಂಡರ್/ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: ಪೊಲೀಸ್ ಪ್ರಧಾನ ಕಛೇರಿಯ ಆದೇಶ ಪತ್ರ ಸಂಖ್ಯೆ: ವಾಸಾ(1)40/2009–10 ದಿನಾಂಕ:21.02.2011

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, 1ನೇ ಪಡೆ ಕೆ.ಎಸ್.ಆರ್.ಪಿ. ಘಟಕದಲ್ಲಿರುವ ಕೆಳಗೆ ನಮೂದಿಸಲಾದ 06(ಆರು) ವಿವಿಧ ಮಾದರಿಯ ವಾಹನಗಳನ್ನು ದಿನಾಂಕ:18.05.2011ರ ಬೆಳಗ್ಗೆ 11–00 ಗಂಟೆಗೆ ಸರಿಯಾಗಿ 1ನೇ ಪಡೆ ಕೆ.ಎಸ್.ಆರ್.ಪಿ. ಘಟಕದ ವಾಹನ ವಿಭಾಗದ ಆವರಣದಲ್ಲಿ ಟೆಂಡರ್/ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಹರಾಜು ಪ್ರಕ್ರಿಯೆಯನ್ನು ಏರ್ಪಡಿಸಲಾಗಿದೆ.

ಕ್ರ.ಸಂ.	ವಾಹನ ನೊಂದಣಿ ಸಂಖ್ಯೆ	ಮಾದರಿ	ತಯಾರಿಕೆ ವರ್ಷ
1.	ಕೆಎ–01–ಜಿ–102	ಮಹೇಂದ್ರ ಜೀಪು	1990
2.	ಕೆಎ–01–ಜಿ–297	ಟಾಟಾ 807 ವ್ಯಾನು	1990
3.	ಕೆಎ–01–ಜಿ–322	ಟಾಟಾ 807 ವ್ಯಾನು	1991
4.	ಕೆಎ–16–ಜಿ–17	ಟಾಟಾ 807 ವ್ಯಾನು	1991
5.	ಕೆಎ–16–ಜಿ–20	ಟಾಟಾ 807 ವ್ಯಾನು	1991
6.	ಕೆಎ–01–ಜಿ–1035	ಟಾಟಾ 807 ವ್ಯಾನು	1992

ಸದರಿ ಅನುಪಯುಕ್ತ ವಾಹನಗಳನ್ನು ಕಮಾಂಡೆಂಟ್ ರವರ ಕಛೇರಿ, 1ನೇ ಪಡೆ ಕೆ.ಎಸ್.ಆರ್.ಪಿ. #60, ರಿಚ್ಮಂಡ್ ರಸ್ತೆ, ಬೆಂಗಳೂರು–25ರ ವಾಹನ ಸಾರಿಗೆ ವಿಭಾಗದ ಆವರಣದಲ್ಲಿ ಕಛೇರಿಯ ವೇಳೆಯಲ್ಲಿ ನೋಡಲು ಅವಕಾಶವಿರುತ್ತದೆ.

ಟೆಂಡರುಗಳನ್ನು ಸಲ್ಲಿಸಲು ಬಯಸುವ ಸಾರ್ವಜನಿಕರು ಮೊಹರು ಮಾಡಿದ ಲಕೋಟೆಯ ಮೇಲ್ಭಾಗದಲ್ಲಿ "ನಿರುಪಯುಕ್ತ ಪೊಲೀಸ್ ವಾಹನವನ್ನು ಖರೀದಿಸುವ ಬಗ್ಗೆ" ಎಂದು ಬರೆದು ಅದರಡಿಯಲ್ಲಿ ಕಮಾಂಡೆಂಟ್, 1ನೇ ಪಡೆ ಕೆ.ಎಸ್.ಆರ್.ಪಿ. #60, ರಿಚ್ಮಂಡ್ ರಸ್ತೆ, ಬೆಂಗಳೂರು–560025 ಎಂದು ನಮೂದಿಸಿದ ಈ ವಿಳಾಸಕ್ಕೆ ಖುದ್ದಾಗಿ ಇಲ್ಲವೇ ಅಂಚೆ ಮೂಲಕ ದಿನಾಂಕ:17.05.2011ರ ಸಂಜೆ 4.00 ಗಂಟೆ ಒಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ನಂತರ ಬಂದಂತಹ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಕಮಾಂಡೆಂಟ್,

ಪಿ.ಆರ್.171 1ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು.

ಜಂಟಿ ಕೃಷಿ ನಿರ್ದೇಶಕರ ಕಛೇರಿ, ಕೃಷಿ ಇಲಾಖೆ, ಚಿತ್ರದುರ್ಗ

ಅಧಿಸೂಚನೆ

ಸಂಖ್ಯೆ: ಜಕೃನಿ/ಚಿ/ಲೆಕ್ಕ–3/ಅ.ಉ.ವಸ್ತು/ವಿಲೇವಾರಿ/2009–10, ದಿನಾಂಕ:28.03.2011

ವಿಷಯ: ಈ ಕಛೇರಿಯ ಅನುಪಯುಕ್ತ ವಸ್ತುಗಳ ಬಹಿರಂಗ ಹರಾಜು ಮಾಡುವ ಬಗ್ಗೆ.

ಉಲ್ಲೇಖ: ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಾಮಾನ್ಯ/ ಜವ/ ಅನುಪ/100/2007–08, ದಿನಾಂಕ:07.03.2011.

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖಿತ ಆದೇಶದಲ್ಲಿ ನಿರುಪಯುಕ್ತಗೊಳಿಸಲಾಗಿರುವ ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಿತ್ರದುರ್ಗದಲ್ಲಿನ ಕೆಳಕಂಡ ಅನುಪಯುಕ್ತ ವಸ್ತುಗಳನ್ನು ದಿನಾಂಕ:14.06.2011 ರಂದು ಬೆಳಗ್ಗೆ 11.00 ಗಂಟೆಗೆ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜು ಮಾಡಲು ನಿಗದಿಪಡಿಸಲಾಗಿದೆ. ಆದುದರಿಂದ ಇಚ್ಛೆಯುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ ಅನುಪಯುಕ್ತ ವಸ್ತುಗಳನ್ನು ಖರೀದಿಸಬಹುದಾಗಿದೆ.

ಹರಾಜು ವಸ್ತುಗಳ ವಿವರ

ಕ್ರ. ಸಂ.	ಅನುಪಯುಕ್ತ ವಸ್ತುಗಳ ವಿವರ	ಪರಿಮಾಣ	ಕ್ರ.ಸಂ.	ಅನುಪಯುಕ್ತ ವಸ್ತುಗಳ ವಿವರ	ಪರಿಮಾಣ
1.	ಸ್ಟೀಲ್ ರಿವಾಲ್ವಿಂಗ್ ಚೇರ್	01	10.	s ಟೈಪ್ ಚೇರ್ ವಿತ್ ಅರ್ಮ್	09
2.	ಬೀಗಗಳು	02	11.	ಫೋಟೋ ಪೋನೋ ಪ್ರೊಜೆಕ್ಟರ್ ವಿತ್ ಸ್ಟಾಂಡ್	01
3.	ಸ್ಟೀಲ್ ರ್‍ಯಾಕ್	01	12.	ಹ್ಯಾಲೋಜೆನ್ ಲ್ಯಾಂಪ್ಸ್	04
4.	ಟೀಕ್ ವುಡ್ ಟೇಬಲ್	01	13.	ಫೋಟೋ ಪೋನೋ ಓವರ್ ಹೆಡ್ ಪ್ರಾಜೆಕ್ಟರ್	01
5.	ನೋಟೀಸ್ ಬೋರ್ಡ್	02	14.	ಸ್ಲೈಡ್ ಟ್ರಾನ್ಸ್‌ಫೆನ್ಸಿ ಬಾಕ್ಸ್	01
6.	ಟಾರ್ಚ್	01	15.	ಲ್ಯಾಮಿನೇಟಿಂಗ್ ಮಿಷನ್	01
7.	ಐಬ್ಯಾಕ್ ಚೇರ್ ವಿತ್ ಕುಶನ್	01	16.	ಸ್ಟೀಲ್ ಕ್ಯಾಬಿನೆಟ್ ಸರ್ವೀಸ್ ಕಿಟ್	01
8.	s ಟೈಪ್ ಚೇರ್ ವಿತ್ ಕುಶನ್	03	17.	ಕ್ಯಾಷ್ ಬಾಕ್ಸ್	01
9.	ಆಫೀಸರ್ ರಿವಾಲ್ವಿಂಗ್ ಚೇರ್	02	18.	ಪೋಸ್ಟರ್ ಬಯೋಚಾರ್ಟ್	01
			19.	ಎಲೆಕ್ಟ್ರಾನಿಕ್ ಬೈಂಡಿಂಗ್ ಮಿಷನ್	01

ಮೇಲ್ಕಂಡ ಅನುಪಯುಕ್ತ ವಸ್ತುಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇಗೊಳಿಸಲಾಗುವುದು. ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಈ ಕೆಳಗೆ ಸೂಚಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.

ಟೆಂಡರ್/ ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು

1) ಹರಾಜಿನಲ್ಲಿ ಪಾಲ್ಗೊಳ್ಳಲು ಇಚ್ಛೆಯುಳ್ಳವರು 3000/– ಮುಂಗಡ ಠೇವಣಿಯಾಗಿ ಹರಾಜಿನ ದಿನ ಬೆಳಿಗ್ಗೆ 10.00 ಗಂಟೆಗೆ ಕಟ್ಟಬೇಕು.
2) ಯಶಸ್ವಿ ಬಿಡ್ಡುದಾರರು ಮಾರಾಟ ತೆರಿಗೆಯನ್ನು ನಿಯಮದಂತೆ ಪಾವತಿಸತಕ್ಕದ್ದು.
3) ಹರಾಜಿಗೆ ಇಟ್ಟ ವಸ್ತುಗಳನ್ನು ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಕಛೇರಿಯಲ್ಲಿ ಕೆಲಸದ ದಿನಗಳಂದು ವೀಕ್ಷಿಸಬಹುದು.
4) ಹೆಚ್ಚಿನ ಹರಾಜು ನಿರ್ಣಯವನ್ನು ಅತ್ಯುನ್ನತ ಹರಾಜು ಬೆಲೆಯ ಮೇಲೆ ನಿರ್ಣಯಿಸಲಾಗುವುದು.
5) ಹರಾಜಿನ ಪ್ರಕ್ರಿಯೆಯಲ್ಲಿ ಯಾವುದೇ ವಿವಾದವಾದ ಪಕ್ಷದಲ್ಲಿ ಹರಾಜನ್ನು ತಿರಸ್ಕರಿಸುವ, ಮುಂದುವರೆಸುವ ಹಾಗೂ ರದ್ದುಪಡಿಸುವ ಹಕ್ಕನ್ನು ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಇವರು ಹೊಂದಿರುತ್ತಾರೆ.
6) ಹರಾಜಿನ ಎಲ್ಲಾ ವಿಷಯಗಳಲ್ಲಿ ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಇವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. ಮತ್ತು ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಈ ತೀರ್ಮಾನಕ್ಕೆ ಬದ್ಧರಾಗಿರಬೇಕು.
7) ಹರಾಜಿಗೆ ಸಂಬಂಧಿಸಿದಂತೆ ಕೃಷಿ ಆಯುಕ್ತರು, ಬೆಂಗಳೂರು ಇವರ ಅನುಮೋದನೆ ಪಡೆದ ನಂತರ ಹೆಚ್ಚು ಬಿಡ್ ಮಾಡಿದ ಹರಾಜುದಾರರು ನಿಗದಿತ 7 ದಿನಗಳೊಳಗಾಗಿ ಪೂರ್ತಿ ಹಣವನ್ನು ತೆರಿಗೆ ಸಹಿತ ನಗದು ರೂಪದಲ್ಲಿ ಪಾವತಿ ಮಾಡಿ ವಸ್ತುಗಳನ್ನು ಅವರ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗತಕ್ಕದ್ದು. ಯಾವ ಕಾರಣದಿಂದಲೂ ಈ ಅವಧಿಯನ್ನು ವಿಸ್ತರಿಸುವುದಿಲ್ಲ ಮತ್ತು ಈ ನಿಯಮ ಪಾಲಿಸದಿದ್ದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

8) ಅತೀ ಹೆಚ್ಚು ಬಿಡ್ ಮಾಡಿದ ಹರಾಜುದಾರರನ್ನುಳಿದು ಉಳಿದ ಹರಾಜುದಾರರಿಗೆ ಮುಂಗಡ ಠೇವಣಿಯನ್ನು ಹರಾಜಿನ ನಂತರ ಹಿಂದಿರುಗಿಸಲಾಗುವುದು.

ಜಂಟಿ ಕೃಷಿ ನಿರ್ದೇಶಕರು,
ಪಿ.ಆರ್.173 ಚಿತ್ರದುರ್ಗ.

ಕೃಷಿ ಇಲಾಖೆ
ವ್ಯವಸ್ಥಾಪಕರ ಕಛೇರಿ, ಬೀಜೋತ್ಪಾದನಾ ಕೇಂದ್ರ, ಹಳ್ಳಿಕೆರೆ, ಭದ್ರಾವತಿ ತಾಲ್ಲೂಕು
ಬಹಿರಂಗ ಹರಾಜು ಪ್ರಕಟಣೆ
ನಂ.ಬಿ.ಕೇಂ.ಹ/ತೆಂಗಿನ ಫಸಲು/ಬ.ಹ/2011-12, ದಿನಾಂಕ:06.04.2011

ವಿಷಯ: ತೆಂಗು ಫಸಲಿನ ಬಹಿರಂಗ ಹರಾಜು ಕುರಿತು.

ಕ್ರ. ಸಂ.	ಕೃಷಿಕ್ಷೇತ್ರ	ಫಸಲಿನ ಹೆಸರು ಅವಧಿ	ಗಿಡಗಳ ಸಂಖ್ಯೆ	ಬಹಿರಂಗ ಹರಾಜು ದಿನಾಂಕ ಮತ್ತು ವೇಳೆ	ಬಹಿರಂಗ ಹರಾಜು ನಡೆಯುವ ಸ್ಥಳ	ಇ.ಎಂ.ಡಿ. ರೂ.
1	2	3	4	5	6	7
1.	ಬೀಜೋತ್ಪಾದನಾ ಕೇಂದ್ರ, ಹಳ್ಳಿಕೆರೆ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.	ತೆಂಗು 01.06.2011 ರಿಂದ 31.05.2012	268	25.05.2011 ಬೆಳಿಗ್ಗೆ 11-00 ಗಂಟೆಗೆ	ಉಪಕೃಷಿ ನಿರ್ದೇಶಕರ ಕಛೇರಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಹಳ್ಳಿಕೆರೆ, ಭದ್ರಾವತಿ ತಾ: ಶಿವಮೊಗ್ಗ ಜಿಲ್ಲೆ.	2500-00

ಇತರೆ ವಿವರಗಳನ್ನು ವ್ಯವಸ್ಥಾಪಕರು, ಬೀಜೋತ್ಪಾದನಾ ಕೇಂದ್ರ, ಹಳ್ಳಿಕೆರೆ ಇವರ ಕಛೇರಿಯಲ್ಲಿ ವಿವರಣೆ ಪಡೆಯಬಹುದು.

ಹರಾಜಿನ ಷರತ್ತುಗಳು

1) ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುನ್ನ ರೂ.2,500 ರೂ. ಠೇವಣಿ ಇಡತಕ್ಕದ್ದು.
2) ಹರಾಜಿನಲ್ಲಿ ಅತೀ ಹೆಚ್ಚು ಬಿಡ್ ಮಾಡಿದವರನ್ನು ಬಿಟ್ಟು ಉಳಿದವರ ಠೇವಣಿಯನ್ನು ಹರಾಜು ಮುಗಿದ ನಂತರ ಹಿಂದಿರುಗಿಸಲಾಗುವುದು.
3) ಹರಾಜಿನಲ್ಲಿ ವಿಜಯಿಯಾದವರು ಬಿಡ್ ಮಾಡಿದ ಶೇ.50 ರಷ್ಟು ಭಾಗವನ್ನು ಅದೇ ದಿನ ಪಾವತಿ ಮಾಡತಕ್ಕದ್ದು.
4) ಉಳಿದ ಶೇ.50 ರಷ್ಟು ಭಾಗವನ್ನು ಮೇಲಾಧಿಕಾರಿಗಳಿಂದ ಅನುಮೋದನೆಗೆ ಬಂದ ನಂತರ 10 ದಿನಗಳೊಳಗಾಗಿ ಪಾವತಿಸಬೇಕು.
5) ಹರಾಜು ಅವಧಿ ಹರಾಜು ದಿನಾಂಕ:01.06.2011 ರಿಂದ 31.05.2012 (12 ತಿಂಗಳು) ವರೆಗೆ ಸೀಮಿತಗೊಳಿಸಲಾಗಿದೆ.
6) ಫಸಲಿನ ಕಾವಲು ಕಟ್ಟಳೆಯನ್ನು ಸಫಲ ಬಿಡ್‌ದಾರರೇ ನೋಡತಕ್ಕದ್ದು.
7) ಫಸಲು ಕಟಾವು ಮಾಡಿಕೊಳ್ಳುವ ಅವಧಿಗೆ ಕಟಾವು ಅವಧಿಗೆ ಸೀಮಿತಗೊಳಿಸಬೇಕು ಬಲಿತ ಕಾಯಿಗಳನ್ನು ಮಾತ್ರ ಕೊಯ್ಲು ಮಾಡಲು ಅವಕಾಶವಿರುತ್ತದೆ.
8) ಫಸಲು ಯಾವುದೇ ಪ್ರಕೃತಿ ವಿಕೋಪಕ್ಕೆ ಹಾನಿಯಾದರೆ ಇಲಾಖೆಯು ಜವಾಬ್ದಾರಿಯಲ್ಲ ಹಾಗೂ ಯಾವುದೇ ಪರಿಸ್ಥಿತಿಯಲ್ಲಿ ಹಣ ಹಿಂದಿರುಗಿಸಲಾಗುವುದಿಲ್ಲ.
9) ಫಸಲಿಗೆ ಯೋಗ್ಯಬೆಲೆ ಬಾರದೆ ಇದ್ದ ಪಕ್ಷದಲ್ಲಿ ಕಟಾವಿಗೆ ಅನುಮತಿ ನೀಡುವುದು, ತಿರಸ್ಕರಿಸುವುದು ಹಾಗೂ ಮುಂದೂಡುವುದು ಇಲಾಖೆಯ ಸಕ್ಷಮ ಪ್ರಾಧಿಕಾರಕ್ಕೆ ಸೇರಿರುತ್ತದೆ.

ವ್ಯವಸ್ಥಾಪಕರು
ಪಿ.ಆರ್.175 ಬೀಜೋತ್ಪಾದನಾ ಕೇಂದ್ರ ಹಳ್ಳಿಕೆರೆ,
ಭದ್ರಾವತಿ ತಾಲ್ಲೂಕು.

ಉದ್ಯೋಗ ಮತ್ತು ತರಬೇತಿ ಇಲಾಖೆ
ಪ್ರಾಚಾರ್ಯರ ಕಛೇರಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು ರಸ್ತೆ, ಬೆಂಗಳೂರು-22
ಪ್ರಕಟಣೆ
ಸಂಖ್ಯೆ: ಕೈತಸಂ/ತರಬೇತಿ/ಬೆ-22/ಕಟ್ಟಡ/ಉಪಹಾರಗೃಹ/2010-11, ದಿನಾಂಕ:08.04.2011

ವಿಷಯ: ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು ರಸ್ತೆ, ಬೆಂಗಳೂರು-22 ಇಲ್ಲಿನ ಸಸ್ಯಾಹಾರಿ ಉಪಾಹಾರ ಮಂದಿರ (ಕ್ಯಾಂಟೀನ್) ನನ್ನು ಬಾಡಿಗೆ ಆಧಾರದ ಮೇಲೆ ನೀಡುವ ಬಗ್ಗೆ.

ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು ರಸ್ತೆ, ಬೆಂಗಳೂರು-22 ಇಲ್ಲಿನ ಸಸ್ಯಾಹಾರಿ ಉಪಾಹಾರ ಮಂದಿರದ (ಕ್ಯಾಂಟೀನ್)ನ್ನು ಮಾಸಿಕ ಬಾಡಿಗೆ ಆಧಾರ ಮೇಲೆ ಟೆಂಡರ್‌ನ ನಿಬಂಧನೆಗೊಳಪಟ್ಟು ನಡೆಸಲು ಅನುಭವ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಟೆಂಡರ್ ಫಾರಂ ಮತ್ತು ನಿಬಂಧನೆಗಳನ್ನು ರೂ.50/- ನಗದು ಪಾವತಿಸಲು ದಿನಾಂಕ:11.04.2011 ರಿಂದ ಸದರಿ ಸಂಸ್ಥೆಯ ಎಲ್ಲಾ ಕೆಲಸದ ದಿನಗಳಲ್ಲಿ ಪಡೆಯಬಹುದಾಗಿದೆ. ತುಂಬಿದ ಅರ್ಜಿ ಜೊತೆಯಲ್ಲಿ ಇ.ಎಂ.ಡಿ. ಮೊತ್ತ ರೂ.500/- ನ ಡಿ.ಡಿ.ಯೊಂದಿಗೆ ದಿನಾಂಕ:30.06.2011 ರ ಮಧ್ಯಾಹ್ನ 3.00 ಗಂಟೆಯೊಳಗೆ ಸಲ್ಲಿಸಬೇಕು.

ಟೆಂಡರ್ ಲಕೋಟೆಯನ್ನು ದಿನಾಂಕ:30.06.2011 ರಂದು ಮಧ್ಯಾಹ್ನ 3.15ಕ್ಕೆ ತೆರೆಯಲಾಗುವುದು. ಈ ಸಮಯದಲ್ಲೂ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರನ್ನು ಸಂಪರ್ಕಿಸಬಹುದಾಗಿದೆ.

ಪ್ರಾಚಾರ್ಯರು,
ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ,
ತುಮಕೂರು ರಸ್ತೆ, ಬೆಂಗಳೂರು–560 022.

ಪಿ.ಆರ್.179

FORM-IV

(See Rule 12)

NOTICE

It is hereby notified that the undersigned has changed his name from **DEVAKKA. BASAVANNEPPA. GIRINIWADDAR to DEVAKKA. BASAVANNEPPA. GANGAPUTRA.**

PD-40

DEVAKKA. BASAVANNEPPA. GIRINIWADDAR

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೇಮಕಾತಿ ಆದೇಶ

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ಜವಾನರ (ಡಿ–ಗ್ರೂಪ್) ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ:21.11.2001 ರನ್ವಯ ಪ್ರಕಟಿಸಿರುವ ಬ್ಯಾಕ್‌ಲಾಗ್ ನೇಮಕಾತಿ ನಿಯಮಗಳು 2001 (ದಿನಾಂಕ:22.11.2001 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

2) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಅಲಾಟ್‌ಮೆಂಟ್ ಆದೇಶ ಸಂಖ್ಯೆ: EST–2–235/2003–04 ದಿನಾಂಕ: 25.01.2011.

ಪ್ರಸ್ತಾವನೆ:

ಈ ಇಲಾಖೆಯ ಕೆಳಕಂಡ ಜಿಲ್ಲೆಯಲ್ಲಿ (ಡಿ–ಗ್ರೂಪ್) ಜವಾನರ ವೃಂದದಲ್ಲಿ ಕೆಳಕಂಡಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರು ಇವರಿಗೆ ವರದಿ ಮಾಡಲಾಗಿತ್ತು.

ಕ್ರ.ಸಂ.	ಜಿಲ್ಲೆ	ಸದರಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ		
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
1.	ಹಾವೇರಿ ಜಿಲ್ಲೆ	ಒಂದು	ಒಂದು	ಎರಡು

ಮೇಲೆ ಗುರುತಿಸಿದ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ ಕೆಳಕಂಡ ಅಭ್ಯರ್ಥಿಯನ್ನು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರು ಅವರ ಉಲ್ಲೇಖ (2)ರ ಅಲಾಟ್‌ಮೆಂಟ್ ಆದೇಶದಲ್ಲಿ ಈ ಜಿಲ್ಲೆಗೆ ಅಲಾಟ್ ಮಾಡಿ ಕೆಳಕಂಡ ಅಭ್ಯರ್ಥಿಯನ್ನು ಈ ಜಿಲ್ಲೆಯಲ್ಲಿ ಜವಾನರೆಂದು ನೇಮಕ ಮಾಡಿಕೊಳ್ಳುವಂತೆ ನಿರ್ದೇಶಿಸಿದ್ದರ ಮೇರೆ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಜಿನೋಹಾ/ಸಿಬ್ಬಂದಿ/6/2010–11, ದಿನಾಂಕ:20ನೇ ಏಪ್ರಿಲ್, 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ (1)ರ ಬ್ಯಾಕ್‌ಲಾಗ್ ನಿಯಮಗಳನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಉಲ್ಲೇಖ (2)ರಲ್ಲಿನ ಅಲಾಟ್‌ಮೆಂಟ್ ಆದೇಶದಲ್ಲಿ ಕಂಡುಬಂದ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಈ ಜಿಲ್ಲೆಯಲ್ಲಿ ಖಾಲಿ ಇರುವ ಜವಾನರ ಹುದ್ದೆಯಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ರೂ.4800–100–6000–125–6500–150–7100–175–7275ರ ವೇತನ ಶ್ರೇಣಿಯಲ್ಲಿ ತಾತ್ಕಾಲಿಕವಾಗಿ ಜವಾನರೆಂದು ನೇಮಕ ಮಾಡಲಾಗಿದೆ. ಹಾಗೂ ಕೆಳಕಂಡ ಅಭ್ಯರ್ಥಿಯನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಕಛೇರಿಗೆ ಜವಾನರೆಂದು ಸ್ಥಳ ನಿಯುಕ್ತಿಗೊಳಿಸಿದೆ.

ಕ್ರ ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	SC / ST	ಜನ್ಮ ದಿನಾಂಕ	3–7–2004ರ ಅಂತ್ಯಕ್ಕೆ ಅಭ್ಯರ್ಥಿಯ ವಯಸ್ಸು ವ–ತಿಂ–ದಿ	ವಿದ್ಯಾರ್ಹತೆ ಮತ್ತು ಶೇಕಡವಾರು ಅಂಕಗಳು	ಅಭ್ಯರ್ಥಿಯನ್ನು ಜವಾನರೆಂದು ನೇಮಕ ಮಾಡಿದ ಕಛೇರಿ	ಅಭ್ಯರ್ಥಿಯನ್ನು ಯಾವ ಮೀಸಲಾತಿ ಅಡಿಯಲ್ಲಿ ಮತ್ತು ಯಾವ ವರ್ಗೀಕರಣದ ಅಡಿಯಲ್ಲಿ ನೇಮಕ ಮಾಡಲಾಗಿದೆಯೋ ಅದರ ವಿವರ
1	2	3	4	5	6	7	8

1	2	3	4	5	6	7	8
1.	ರವೀಂದ್ರ ಬಿನ್ ಅಂಬಣ್ಣ ಪೋಸ್ಟ್: ಮಂಗಲಗಿ ತಾ: ಹುಮನಾಬಾದ್ ಜಿ: ಬೀದರ್.	SC	22–07–1966	37–11–11	ಏಳನೇ ತರಗತಿ 87.333	ಉಪನೋಂದಣಿ ಕಛೇರಿ, ಶಿಗ್ಗಾಂವ, ಹಾವೇರಿ ಜಿಲ್ಲೆ.	ಪರಿಶಿಷ್ಟ ಜಾತಿ ಗ್ರಾಮೀಣ ಅಭ್ಯರ್ಥಿ ಹೆಚ್ಚುವರಿ ಪಟ್ಟಿ

ಈ ನೇಮಕಾತಿ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಮತ್ತು ಅಭ್ಯರ್ಥಿಯು ಈ ಕೆಳಕಂಡ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಷರತ್ತುಗಳು:

1) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು ಸದರಿ ಅಭ್ಯರ್ಥಿಯನ್ನು ಯಾವುದೇ ನೋಟೀಸ್ ಅಥವಾ ಕಾರಣ ನೀಡದೇ ಯಾವುದೇ ಘಳಿಗೆಯಲ್ಲಾದರೂ ಕೆಲಸದಿಂದ ತೆಗೆದು ಹಾಕುವ ಷರತ್ತಿಗೆ ಒಳಪಟ್ಟು ನೇಮಕಾತಿ ಮಾಡಲಾಗಿದೆ.
2) ಈ ನೇಮಕಾತಿ ಆದೇಶವು ಯಾವುದೇ ಸಂದರ್ಭದಲ್ಲಾದರೂ ತಿದ್ದೋಲೆ ಮತ್ತು ಮಾರ್ಪಾಡಿಗೆ ಒಳಪಟ್ಟಿರುತ್ತದೆ.
3) ಸದರಿ ಅಭ್ಯರ್ಥಿಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿನ ನಿಬಂಧನೆಗಳಿಗೆ ಒಳಪಡಿಸಿ ಮತ್ತು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷದ ಪರೀಕ್ಷಾರ್ಥ ಅವಧಿಗೆ ಒಳಪಡಿಸಿ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ.
4) ಎರಡು ವರ್ಷದ ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳು ತಮ್ಮ ವರ್ಗಾವಣೆಗಾಗಿ ರಾಜಕೀಯ ಅಥವಾ ಇನ್ನಾವುದೇ ರೀತಿಯ ಒತ್ತಡ ತಂದಲ್ಲಿ ಅಂತಹವರ ವಿರುದ್ಧ ಕಾನೂನು ರೀತ್ಯಾ ಶಿಸ್ತು ಕ್ರಮ ಜರುಗಿಸಲಾಗುವುದು.
5) ನೇಮಕಾತಿ ಮಾಡಿರುವ ಸ್ಥಳದ ಅಥವಾ ಕಛೇರಿಯ ಮಾರ್ಪಾಡಿಗಾಗಿ ಯಾವುದೇ ಮನವಿಗಳನ್ನು ಯಾವುದೇ ಕಾರಣಕ್ಕಾಗಲೀ ಪುರಸ್ಕರಿಸಲಾಗುವುದಿಲ್ಲ.
6) ಈ ನೇಮಕಾತಿಯು ಆಗಿಂದಾಗ್ಗೆ ಜಾರಿಯಲ್ಲಿರುವ ಸೇವಾ ಷರತ್ತುಗಳು ನಿಯಮ ಮತ್ತು ಆದೇಶಗಳಿಗೆ ಒಳಪಡುತ್ತದೆ. ಹಾಗೂ ಸದರಿ ಅಭ್ಯರ್ಥಿಗಳು ಕೆ.ಸಿ.ಎಸ್.ಆರ್. ಮತ್ತು ಕೆ.ಸಿ.ಎಸ್ (ನಡತೆ) ನಿಯಮಗಳು 1966ರಲ್ಲಿನ ಮತ್ತು ಕೆ.ಸಿ.ಎಸ್. (ಸಿ.ಸಿ.ಎ.) ನಿಯಮಗಳು 1957ರಲ್ಲಿನ ಹಾಗೂ ಆಗಿಂದಾಗ್ಗೆ ಜಾರಿಗೆ ಬರುವ ಹಾಗೂ ಜಾರಿಯಲ್ಲಿರುವ ಇತರೆ ಸೇವಾ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಡುತ್ತಾರೆ.
7) ಈ ಆದೇಶ ಮುಟ್ಟಿದ 15 (ಹದಿನೈದು) ದಿನಗಳ ಅವಧಿಯೊಳಗೆ ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗತಕ್ಕದ್ದು ಒಂದು ವೇಳೆ ನಿಗದಿತ ಅವಧಿಯೊಳಗೆ ಕೆಲಸಕ್ಕೆ ಹಾಜರಾಗದಿದ್ದಲ್ಲಿ ಈ ನೇಮಕಾತಿ ರದ್ದಾಗುವುದು ಹಾಗೂ ನೇಮಕಾತಿ ಬಗ್ಗೆ ಅಭ್ಯರ್ಥಿಯು ಯಾವ ಹಕ್ಕನ್ನೂ ಹೊಂದಿರುವುದಿಲ್ಲವೆಂದು ತಿಳಿಯತಕ್ಕದ್ದು.
8) ಅಭ್ಯರ್ಥಿಗಳು ಅವರ ಕಾರ್ಯ, ಕರ್ತವ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ದೆ, ಭಕ್ತಿ ಮತ್ತು ಆಸಕ್ತಿಯಿಂದ ತೃಪ್ತಿಕರವಾಗಿ ಮಾಡತಕ್ಕದ್ದು.
9) ಅಭ್ಯರ್ಥಿಗಳು ಅವರ ದುರ್ವರ್ತನೆಯಿಂದ, ದುರ್ನಡತೆಯಿಂದ ಹಾಗೂ ಉದಾಸೀನತೆಯಿಂದ ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಿದಂತೆ ಉಂಟುಮಾಡುವ ಎಲ್ಲಾ ರೀತಿಯ ಆರ್ಥಿಕ ನಷ್ಟಗಳನ್ನು ಸರ್ಕಾರಕ್ಕೆ ಸದರಿ ಅಭ್ಯರ್ಥಿಗಳು ಭರಿಸಿಕೊಡಲು ಬದ್ದರಾಗಿರುತ್ತಾರೆ ಹಾಗೂ ಹೊಣೆಗಾರರಾಗಿರುತ್ತಾರೆಂದು ತಿಳಿಯತಕ್ಕದ್ದು.
10) ಅಭ್ಯರ್ಥಿಗಳು ಅವರ ಕರ್ತವ್ಯಗಳನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಗಳನ್ನು ಗುಪ್ತವಾಗಿಟ್ಟು ಅದರ ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಪಾಡತಕ್ಕದ್ದು.
11) ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರದಿಂದ ಸತ್ಯಾಪನೆಗೆ ಒಳಪಡುತ್ತವೆ.
12) ಅಭ್ಯರ್ಥಿಯು ತಮ್ಮ ಜಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಇತ್ಯಾದಿಯಾಗಿ ಯಾವುದೇ ವಿಚಾರದಲ್ಲಿ ಅಭ್ಯರ್ಥಿಯು ನೀಡಿರುವ ವಿವರಗಳು ಸುಳ್ಳೆಂದಾಗಲೀ ಅಥವಾ ತಪ್ಪೆಂದಾಗಲೀ ತಿಳಿದು ಬಂದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
13) ಅಭ್ಯರ್ಥಿಗಳು ಸಲ್ಲಿಸಿರುವ ಆಯಾಯ ಮೀಸಲಾತಿ ಪ್ರಮಾಣ ಪತ್ರಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯಾಯ ಮೀಸಲಾತಿ category ಯಲ್ಲಿ ನೇಮಕ ಮಾಡಿರುವುದರಿಂದ ಸದರಿ ಅಭ್ಯರ್ಥಿಗಳು ಆಯಾಯ ಮೀಸಲಾತಿ categoryಗೆ ಸೇರಿದವರಲ್ಲವೆಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಶಾಶ್ವತವಾಗಿ ಯಾವುದೇ ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.
14) ಅಭ್ಯರ್ಥಿಗಳು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಲ್ಲವೆಂದು ಸತ್ಯಾಪನೆಯಿಂದ ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಶಾಶ್ವತವಾಗಿ ಯಾವುದೇ ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.
15) ಅಭ್ಯರ್ಥಿಯು KGID ಯಲ್ಲಿ ಸರ್ಕಾರಿ ವಿಮೆಯನ್ನು ಕಡ್ಡಾಯವಾಗಿ ಕೆಲಸಕ್ಕೆ ಹಾಜರಾದ ಕೂಡಲೇ ಮಾಡತಕ್ಕದ್ದು.
16) ಅಭ್ಯರ್ಥಿಯು ಕೆಳಕಂಡ ದಾಖಲೆಗಳನ್ನು ತಾವು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ತಪ್ಪದೇ ಹಾಜರುಪಡಿಸತಕ್ಕದ್ದು.
    1) ಅಭ್ಯರ್ಥಿಯು ತಮ್ಮ passport Size ನ ಎರಡು ಇತ್ತೀಚಿನ ಪೋಟೋ
    2) ವಿದ್ಯಾರ್ಹತೆಯ ಬಗ್ಗೆ ಏಳನೇ ತರಗತಿ ಮೂಲ ಅಂಕಪಟ್ಟಿ (Original)
    3) ಜನ್ಮ ದಿನಾಂಕದ ಬಗ್ಗೆ ಮೂಲ T.C. (Original)

4) ಸಂಬಂಧಪಟ್ಟ ಸರ್ಕಾರಿ ಜಿಲ್ಲಾ ಸರ್ಜನ್‌ನಿಂದ ನಿಗದಿತ ನಮೂನೆಯಲ್ಲಿ ಪಡೆದ ವೈದ್ಯಕೀಯ ದೈಹಿಕ ಪ್ರಮಾಣ ಪತ್ರ (Original) (Physical Fitness Certificate)

5) ಅಭ್ಯರ್ಥಿಯು ಕಡೆಯದಾಗಿ ಹಾಜರಾಗಿದ್ದ ಶಾಲೆಯ ಮುಖ್ಯೋಪಾಧ್ಯಾಯರು ನೀಡಿರುವ ನಡತೆ ಪ್ರಮಾಣ ಪತ್ರ (Original)

6) ಈ ಅಭ್ಯರ್ಥಿಯು ಗ್ರಾಮೀಣ ಅಭ್ಯರ್ಥಿಯಾಗಿರುವುದರಿಂದ ನಿಗದಿತ ನಮೂನೆ–2 ರಲ್ಲಿ ಗ್ರಾಮೀಣ ಮೂಲ ಮೀಸಲಾತಿ ಪ್ರಮಾಣ ಪತ್ರ (Original)

ಅಭ್ಯರ್ಥಿಗಳು ಕೆಳಕಂಡ ನಮೂನೆಗಳನ್ನು ಮತ್ತು ಮುಚ್ಚಳಿಕೆಗಳನ್ನು ಕೆಲಸಕ್ಕೆ ಹಾಜರಾಗುವ ಮುನ್ನ ತಪ್ಪದೇ ಬರೆದುಕೊಡತಕ್ಕದ್ದು

17) ಅಭ್ಯರ್ಥಿಯು ಭಾರತದ ಸಂವಿಧಾನಕ್ಕೆ ಬದ್ಧರಾಗಿರುವ ಬಗ್ಗೆ ಪ್ರತಿಜ್ಞಾ ವಿಧಿಯನ್ನು ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.

18) ಅಭ್ಯರ್ಥಿಯು ಮದುವೆಯಾಗಿದ್ದಲ್ಲಿ ಒಬ್ಬರೇ ಪತಿ ಅಥವಾ ಪತ್ನಿ ಹೊಂದಿರುವ ಬಗ್ಗೆ ಕೆ.ಸಿ.ಎಸ್. (ನಡತೆ) ನಿಯಮಗಳು 1966 ರಲ್ಲಿನ ನಿಯಮ 28ರ ರೀತ್ಯ ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿರುವ ಘೋಷಣಾ ಪತ್ರವನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.

19) ಒಂದು ವೇಳೆ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸುಳ್ಳು ಅಥವಾ ನಕಲಿ ಎಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಮತ್ತು ನೇಮಕಾತಿಯನ್ನು ಶಾಶ್ವತವಾಗಿ ರದ್ದುಪಡಿಸಲಾಗುವುದು ಹಾಗೂ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಹಾಗೂ KCS (CCA) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಬದ್ಧನಾಗಿರುತ್ತೇನೆ ಎಂಬ ಬಗ್ಗೆ ಅಭ್ಯರ್ಥಿಯು 20/– ರೂ.ಗಳ ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ–1 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

20) ಈ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಬೇರೆ ಇನ್ಯಾವುದೇ ಅಭ್ಯರ್ಥಿಯು ಅವರ ಆಯ್ಕೆಯನ್ನು ದಾಖಲೆ ಸಹಿತ establish ಮಾಡಿದಲ್ಲಿ ಅಥವಾ ನನ್ನ ನೇಮಕಾತಿಯು ಅಸಿಂಧುವೆಂದು ದಾಖಲೆಗಳ ಸಹಿತ ಸಾಬೀತು ಪಡಿಸಿದಲ್ಲಿ ನನ್ನ ನೇಮಕಾತಿಯನ್ನು ಯಾವುದೇ ಸೂಚನೆ ಇಲ್ಲದೇ ಶಾಶ್ವತವಾಗಿ ರದ್ದುಗೊಳಿಸಿ ನನ್ನ ಬದಲಿಗೆ ಬೇರೊಬ್ಬರನ್ನು ಆಯ್ಕೆ ಮಾಡಬಹುದು ಎಂಬ ಬಗ್ಗೆ ಅಭ್ಯರ್ಥಿಯು 20/– ರೂ. ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ–2 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

21) ಒಂದು ವೇಳೆ ನಾನು ಈ ಇಲಾಖೆಯಲ್ಲಿ ಜವಾನರೆಂದು ನೇಮಕಾತಿ ಹೊಂದುವ ಮೊದಲು ಅಥವಾ ನಾನು ಜವಾನರೆಂದು ನೇಮಕಾತಿ ಹೊಂದಿ ಈ ಇಲಾಖೆಯಲ್ಲಿ ಜವಾನರಾಗಿ ಸರ್ಕಾರಿ ಕೆಲಸಕ್ಕೆ ಹಾಜರಾದ ದಿನಾಂಕದ ನಂತರ ನಾನು ಸರ್ಕಾರಿ ಸೇವೆಯಿಂದ ಶಾಶ್ವತವಾಗಿ ನಿರ್ಗಮಿಸುವ ದಿನಾಂಕದವರೆಗಿನ ಅವಧಿಯಲ್ಲಿ ಅಂದರೆ ನಾನು ಈ ಇಲಾಖೆಯಲ್ಲಿ ಸರ್ಕಾರಿ ನೌಕರನಾಗಿರುವ ಅವಧಿಯಲ್ಲಿ ಈ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಬೇರೆ ಇನ್ಯಾವುದೇ ಅಭ್ಯರ್ಥಿಯಾಗಲೀ ಅಥವಾ ಬೇರೆ ಇನ್ಯಾವುದೇ ಸಾರ್ವಜನಿಕರಾಗಲೀ ದಾಖಲೆಗಳ ಸಹಿತ ಸಕಾರಣಗಳೊಂದಿಗೆ ನಾನು ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿಲ್ಲವೆಂದಾಗಲೀ ಅಥವಾ ನಾನು ಸಲ್ಲಿಸಿರುವ ಏಳನೇ ತರಗತಿಯ ಅಂಕಪಟ್ಟಿಯು ನಕಲಿ (ಖೊಟ್ಟಿ) ಎಂದಾಗಲೀ ದಾಖಲೆಗಳ ಸಹಿತ ಸಾಬೀತುಪಡಿಸಿದಲ್ಲಿ ನನ್ನ ಆಯ್ಕೆಯನ್ನು ಮತ್ತು ಈ ನನ್ನ ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಅಥವಾ ಯಾವುದೇ ಛಳಿಗೆಯಲ್ಲಾದರೂ ಶಾಶ್ವತವಾಗಿ ರದ್ದುಪಡಿಸುವುದಕ್ಕೂ ಹಾಗೂ ಯಾವುದೇ ಕಾರಣ ನೀಡದೇ ಅಥವಾ ಯಾವುದೇ ನೋಟೀಸ್ ನೀಡದೇ ನನ್ನನ್ನು ಸರ್ಕಾರಿ ಸೇವೆಯಿಂದ ಶಾಶ್ವತವಾಗಿ ವಜಾ ಮಾಡುವುದಕ್ಕೂ ನಾನು ಒಪ್ಪಿರುತ್ತೇನೆ ಎಂಬ ಬಗ್ಗೆ ಅಭ್ಯರ್ಥಿಯು ರೂ.20/– ರೂ. ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ–3 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

22) ಸರ್ಕಾರದವರು ಈ ಹಿಂದೆ ಜಾರಿಯಲ್ಲಿದ್ದ ನಿವೃತ್ತಿ ಪಿಂಚಣಿ ಸೌಲಭ್ಯ ಯೋಜನೆಗೆ ಬದಲಾಗಿ ದಿನಾಂಕ:01.04.2006 ರಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ: FD (SPL)-04 PET 2005, ದಿನಾಂಕ:31.03.2006ರ ಆದೇಶದಲ್ಲಿ ಹೊಸದಾಗಿ New defined Contributory Pension Scheme ಎಂಬ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಈ ಹೊಸ ಪಿಂಚಣಿ ಯೋಜನೆಯು ದಿನಾಂಕ:01.04.2006 ರಿಂದ ಅಥವಾ ತದನಂತರ ನೇಮಕಾತಿ ಹೊಂದಿದ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ ಎಂದು ಆದೇಶ ಮಾಡಿರುತ್ತಾರೆ. ಆದ್ದರಿಂದ ಈ ಜಿಲ್ಲೆಯಲ್ಲಿ ನೇಮಕ ಹೊಂದಿದ ಸದರಿ ನೌಕರರು ದಿನಾಂಕ:31.03.2006ರ ಸದರಿ ಸರ್ಕಾರದ ಆದೇಶದನ್ವಯ ಹೊಸ ಪಿಂಚಣಿ ಯೋಜನೆಗೆ ಒಳಪಡುತ್ತಾರೆಂದು ಈ ಮೂಲಕ ಆದೇಶಿಸಿದೆ ಹಾಗೂ ದಿನಾಂಕ:31.03.2006ರ ಸದರಿ ಸರ್ಕಾರದ ಆದೇಶದಲ್ಲಿನ ನಿರ್ದೇಶನಕ್ಕೆ ಸದರಿ ನೌಕರರು ಬದ್ಧರಾಗಿರತಕ್ಕದ್ದು.

ನೇಮಕಾತಿ ಪ್ರಾಧಿಕಾರಿ ಹಾಗೂ
ಜಿಲ್ಲಾ ನೋಂದಣಾಧಿಕಾರಿಗಳು,
ಹಾವೇರಿ ಜಿಲ್ಲೆ, ಹಾವೇರಿ.

ಪಿ.ಆರ್.178

ಕಂದಾಯ ಇಲಾಖೆ

ಅಧಿಸೂಚನೆ

ಸಂಖ್ಯೆ: ಕಂಇ 272 ಮುಸೇವಿ 2007, ಬೆಂಗಳೂರು, ದಿನಾಂಕ:28.02.2011

ವಿಷಯ: ಧಾರ್ಮಿಕ ದತ್ತಿ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರುರವರ ಪತ್ರ ಸಂಖ್ಯೆ: ಪಿಎಸ್‌ಸಿ 11.ಆರ್‌ಬಿ.05.ಪಿಎಸ್‌ಸಿ ದಿನಾಂಕ:14.12.2007.

ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕವಾದ ಈ ಕೆಳಕಂಡ ಅಭ್ಯರ್ಥಿಯನ್ನು ಧಾರ್ಮಿಕ ದತ್ತಿ ಇಲಾಖೆಯ ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ ಇಲ್ಲಿ ತರ್ಕ ಪಂಡಿತರು (ನವೀನ ನ್ಯಾಯ) ಹುದ್ದೆಗೆ ಎರಡು ವರ್ಷಗಳ ಪರಿವೀಕ್ಷಣಾ ಅವಧಿ ಮೇರೆಗೆ (ವೇತನ ಶ್ರೇಣಿ ರೂ.11,400–21,600) ನೇಮಕಾತಿ ಮಾಡಲಾಗಿದೆ.

ಕ್ರ. ಸಂ.	ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ
1.	ಶ್ರೀ ಎಂ.ಎ. ಆಳ್ವಾರ್, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು.

ಸದರಿ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೊಳಪಟ್ಟಿರುತ್ತದೆ.

(ಅ) ಈ ನೇಮಕಾತಿ ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.

(ಆ) ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ಹಾಗೂ ನಡತೆಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.

(ಇ) ಕರ್ನಾಟಕ ಸಿವಿಲ್ ಸೇವೆಗಳು ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಅಡಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ ಹಾಗೂ ಇತರೆ ಪರೀಕ್ಷೆಗಳಲ್ಲಿ ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.

(ಈ) ಇವರ ಸೇವಾ ಜೇಷ್ಠತೆಯು ಪ್ರಸ್ತುತ ಕರ್ನಾಟಕ ಲೋಕಸೇವಾ ಆಯೋಗದ ಆಯಾಯ ವಿಷಯದಲ್ಲಿ ನಿರ್ಧರಿಸಿದಂತೆ ಇರತಕ್ಕದ್ದು. ನಂತರ ಕರ್ನಾಟಕ ಲೋಕಸೇವಾ ಆಯೋಗವು ಕ್ರೋಢೀಕೃತ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಹಾಗೂ ತದನಂತರ ಹಾಗೂ ಸರ್ಕಾರ ಹೊರಡಿಸುವ ಅಧಿಸೂಚನೆಯಲ್ಲಿ ಇರತಕ್ಕದ್ದು.

(ಉ) ಇವರು ಸ್ಥಳನಿಯುಕ್ತಿ ಆದೇಶವನ್ನು ಸ್ವೀಕರಿಸುವ 15 ದಿನಗಳಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.119

ಎಲ್.ಎಸ್. ಶ್ರೀಕಂಠಬಾಬು

ಪೀಠಾಧಿಕಾರಿ,

ಕಂದಾಯ ಇಲಾಖೆ (ಮುಜರಾಯಿ)

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

CERTIFICATE OF REGISTRATION

KBW/REG/40/BNU/2009-10, Dated:17.05.2010

It is hereby certified that the Wakf described hereunder is registered and brought on to the Register of Wakfs in accordance with Section 36 of the Wakf Act, 1995.

Sl.No. of Kitabul Awkaf	Name, Class & Description of the Wakfs	Particulars of Wakf properties	Name of the Muthawalli
	Syed Khasim Wakf, S.No.7, Jakkur Plantation, Jakkur Village, Yelahanka Hobli, Bangalore.	Sy.No.7, situated at Jakkur Village **Measuring:** 02-Acres, East: West: 257 North: South: 339 **Bounded by:** East: By private property belonging to Abdul Gani. West: By Air force training School. North: By Road South: By property belongs to Air force.	Represented by Muthawalli Wakf Al-al-Aulad

This certificate is issued as per the powers delegated in order No.KBW/11/ADM/05-06, Dated:02.03.2006 of the Karnataka State Board of Wakfs.

Addl. Chief Executive Officer,

PD-48

Karnataka State Board of Wakfs.